Volume : 9 | Issue : 167 | September : 19 : 2026 : Saturday
ಸಂಪುಟ : 9 | ಸಂಚಿಕೆ : 167 | ಸೆಪ್ಟೆಂಬರ್ : 19 : 2026 : ಶನಿವಾರ

www.VIKRAMAVAHINI.com

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ವಿಕ್ರಮ ವಾಹಿನಿ

ಪುಟ 4 ₹2 || ಕನ್ನಡ ದಿನಪತ್ರಿಕೆ ||

VIKRAMA VAHINI
PRGI NO: KARKAN/2018/78481





ದೇಹದ ಆಕಾರದ ಕುರಿತು ಟೀಕೆಗೆ ಗುರಿಯಾದ ನಟಿ ಕತ್ರಿನಾ ಕೈಫ್ ಪರ ನಟಿ ಹಾಗೂ ಮಾಜಿ ಸಂಸದೆ ರಮ್ಯಾ ಧ್ವನಿಯೆತ್ತಿದ್ದಾರೆ. ಮಹಿಳೆಯ ದೇಹದಲ್ಲಾಗುವ ಸಹಜ ಬದಲಾವಣೆಗಳನ್ನು ಟೀಕಿಸಬಾರದು ಎಂದು ಅವರು ಹೇಳಿದ್ದಾರೆ.

ಹತಾರ ಸೇವೆ, ಹೇಳಿಕೆ, ಸುತಗಾಯಿ ಒಡೆಯುವಿಕೆ | ಪುಟ 2

ಮುಂದಿನ ದಿನಗಳಲ್ಲಿ 10-12 ಕಡೆ ಸಚಿವ ಸಂಪುಟ ಸಭೆ | ಪುಟ 4

# ಯುಪಿಐ ಹೊಸ ಶುಲ್ಕ; ವ್ಯಾಪಾರಿಗಳಿಗೆ ಹೊರೆ

● ವಿಕ್ರಮ ವಾಹಿನಿ । ನವದೆಹಲಿ

ಅಕ್ಟೋಬರ್ 15ರಿಂದ ರೂ 2,000ಕ್ಕಿಂತ ಹೆಚ್ಚಿನ ಮೊತ್ತದ ಕೆಲವು ಯುಪಿಐ ವ್ಯಾಪಾರಿ ವಹಿವಾಟುಗಳಿಗೆ ಶೇ.0.4ರಷ್ಟು ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಜಾರಿಯಾಗಲಿದೆ. ಶುಲ್ಕವನ್ನು ಗ್ರಾಹಕರಿಂದ ಪಡೆಯದೆ ವ್ಯಾಪಾರಿಯೇ ಭರಿಸಬೇಕಿದ್ದು, ರೂ 75,000 ಹಾಗೂ ಅದಕ್ಕಿಂತ ಹೆಚ್ಚಿನ ವಹಿವಾಟಿಗೆ ಪ್ರತಿ ವಹಿವಾಟಿಗೆ ಗರಿಷ್ಠ ರೂ 300 ಮಿತಿ ನಿಗದಿಪಡಿಸಲಾಗಿದೆ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ (P2P) ಹಣ ವರ್ಗಾವಣೆ ಹಾಗೂ ರೂ 2,000ರವರೆಗಿನ ಅರ್ಹ ವ್ಯಾಪಾರಿ ಪಾವತಿಗಳು ಶುಲ್ಕಮುಕ್ತವಾಗಿರಲಿವೆ.

ಸಣ್ಣ ವ್ಯಾಪಾರಿಗಳಿಗೆ ವಿಶೇಷ ವಿನಾಯಿತಿಯೂ ಇದೆ. ಯುಪಿಐ ಕ್ಯೂಆರ್ ಮೂಲಕ ತಿಂಗಳಿಗೆ ರೂ 1 ಲಕ್ಷದವರೆಗೆ ಹಣ ಸ್ವೀಕರಿಸುವ ಸಣ್ಣ ವ್ಯಾಪಾರಿಗಳು ಎಂಡಿಆರ್‌ನಿಂದ ಹೊರತಾಗಲಿದ್ದಾರೆ. ರೈಲ್ವೆ, ಇಂಧನ, ದೂರಸಂಪರ್ಕ, ವಿಮೆ ಸೇರಿದಂತೆ ಕೆಲವು ಅಗತ್ಯ ಸೇವೆಗಳ ರೂ 2,000ಕ್ಕಿಂತ ಹೆಚ್ಚಿನ ವಹಿವಾಟಿಗೆ ಪ್ರತಿ ವಹಿವಾಟಿಗೆ ರೂ 5ರ ರಿಯಾಯಿತಿ ದರ ನಿಗದಿಯಾಗಿದೆ. ಬಂಡವಾಳ ಮಾರುಕಟ್ಟೆ ಸಂಬಂಧಿತ ಕೆಲವು ಪಾವತಿಗಳಿಗೆ ಶೇ.0.02ರಷ್ಟು ಎಂಡಿಆರ್, ಗರಿಷ್ಠ ರೂ 300 ಮಿತಿ ಅನ್ವಯವಾಗಲಿದೆ.

**ಗ್ರಾಹಕರಿಗೆ ನೇರ ಶುಲ್ಕವಿಲ್ಲ**

ಹೊಸ ಎಂಡಿಆರ್ ನೇರವಾಗಿ ಗ್ರಾಹಕರ ಮೇಲೆ ವಿಧಿಸುವ ಶುಲ್ಕವಲ್ಲ. ಅರ್ಹ ವಹಿವಾಟುಗಳ ವೆಚ್ಚವನ್ನು ವ್ಯಾಪಾರಿಯ ಪಾವತಿ ವ್ಯವಸ್ಥೆಯಲ್ಲಿಯೇ ನಿರ್ವಹಿಸಲಾಗುತ್ತದೆ. ಬ್ಯಾಂಕ್‌ಗಳು ಹಾಗೂ ಪಾವತಿ ಸೇವಾ ಸಂಸ್ಥೆಗಳು ಈ ಶುಲ್ಕವನ್ನು ಗ್ರಾಹಕರಿಗೆ ವರ್ಗಾಯಿಸದಂತೆ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನೂ ಸರ್ಕಾರ ಪರಿಗಣಿಸುತ್ತಿದೆ.

**ಹೆಚ್ಚು ಮೊತ್ತದ ವಹಿವಾಟುಗಳಿಗೆ ಪರಿಣಾಮ**

ಸಾಮಾನ್ಯವಾಗಿ ಸಣ್ಣ ಮೊತ್ತದ ದಿನನಿತ್ಯದ ಯುಪಿಐ ಪಾವತಿಗಳಿಗೆ ಹೊಸ ಶುಲ್ಕ ಅನ್ವಯಿಸುವುದಿಲ್ಲ. ಆದರೆ ರೂ 2,000ಕ್ಕಿಂತ ಹೆಚ್ಚಿನ ಖರೀದಿ, ಎಲೆಕ್ಟ್ರಾನಿಕ್ಸ್, ಬಟ್ಟೆ, ಆನ್‌ಲೈನ್ ಚಿಲ್ಲರೆ ವ್ಯಾಪಾರ ಸೇರಿದಂತೆ ಹೆಚ್ಚಿನ ಮೊತ್ತದ ವ್ಯಾಪಾರಿ ಪಾವತಿಗಳಲ್ಲಿ ವ್ಯಾಪಾರಿಗಳ ವೆಚ್ಚ ಹೆಚ್ಚಾಗಲಿದೆ. ಉದಾಹರಣೆಗೆ ರೂ 3,000 ಪಾವತಿಗೆ ರೂ 12 ಹಾಗೂ ರೂ 50,000 ಪಾವತಿಗೆ ರೂ 200 ಎಂಡಿಆರ್ ಅನ್ವಯಿಸುತ್ತದೆ; ರೂ 1 ಲಕ್ಷದ ವಹಿವಾಟಿಗೆ ಗರಿಷ್ಠ ರೂ 300 ಮಾತ್ರ ಶುಲ್ಕವಾಗಲಿದೆ. ಯುಪಿಐ ವ್ಯವಸ್ಥೆಯ ಮೂಲಸೌಕರ್ಯ, ಭದ್ರತೆ ಹಾಗೂ ವಿಸ್ತರಣೆಗೆ ಅಗತ್ಯವಿರುವ ವೆಚ್ಚವನ್ನು ನಿರ್ವಹಿಸಲು ಹೊಸ ಶುಲ್ಕ ವ್ಯವಸ್ಥೆ ತರಲಾಗಿದೆ ಎಂದು ಸರ್ಕಾರ ಸಮರ್ಥಿಸಿದೆ. ಆದರೆ ವ್ಯಾಪಾರಿ ಸಂಘಟನೆಗಳು ಹೆಚ್ಚುವರಿ ವೆಚ್ಚದಿಂದ ಸಣ್ಣ ಲಾಭಾಂಶದ ವ್ಯವಹಾರಗಳ ಮೇಲೆ ಪರಿಣಾಮ ಬೀರಬಹುದು ಎಂದು ಆತಂಕ ವ್ಯಕ್ತಪಡಿಸಿವೆ. ಕೆಲವು ವ್ಯಾಪಾರಿಗಳು ಹೆಚ್ಚಿನ ಮೊತ್ತದ ಪಾವತಿಗಳಿಗೆ ನಗದು ಸ್ವೀಕಾರದತ್ತ ಮರಳುವ ಸಾಧ್ಯತೆಯನ್ನೂ ಪ್ರಸ್ತಾಪಿಸಿದ್ದಾರೆ.

ಹೆಚ್ಚಿನ ಮೊತ್ತದ ವಹಿವಾಟಿನ ವೆಚ್ಚವನ್ನು ವ್ಯಾಪಾರಿಗಳು ಹೇಗೆ ನಿರ್ವಹಿಸುತ್ತಾರೆ ಎಂಬುದರ ಮೇಲೆ ಗ್ರಾಹಕರಿಗೆ ಸಿಗುವ ಪಾವತಿ ಆಯ್ಕೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.




ಅಕ್ಟೋಬರ್ 15ರಿಂದ ರೂ 2,000ಕ್ಕಿಂತ ಹೆಚ್ಚಿನ ಅರ್ಹ ಯುಪಿಐ ವ್ಯಾಪಾರಿ ವಹಿವಾಟುಗಳಿಗೆ ಶೇ.0.4ರಷ್ಟು ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಜಾರಿಗೆ ಬರಲಿದೆ. ಈ ಶುಲ್ಕವನ್ನು ಗ್ರಾಹಕರ ಬದಲಿಗೆ ವ್ಯಾಪಾರಿಯೇ ಭರಿಸಬೇಕಿದ್ದು, ರೂ 75,000 ಹಾಗೂ ಅದಕ್ಕಿಂತ ಹೆಚ್ಚಿನ ವಹಿವಾಟಿಗೆ ಪ್ರತಿ ವಹಿವಾಟಿಗೆ ಗರಿಷ್ಠ ರೂ 300 ಮಿತಿ ಇರಲಿದೆ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಹಣ ವರ್ಗಾವಣೆ ಹಾಗೂ ನಿಗದಿತ ಮಿತಿಯೊಳಗಿನ ಸಣ್ಣ ವ್ಯಾಪಾರಿಗಳ ವಹಿವಾಟುಗಳಿಗೆ ವಿನಾಯಿತಿ ಮುಂದುವರಿಯಲಿದೆ.

**ಪ್ರಮುಖಾಂಶಗಳು**

- ಅ.15ರಿಂದ ಹೊಸ ಎಂಡಿಆರ್ ವ್ಯವಸ್ಥೆ ಜಾರಿ.
- ರೂ 2,000ಕ್ಕಿಂತ ಹೆಚ್ಚಿನ ಅರ್ಹ P2M ವಹಿವಾಟಿಗೆ ಶೇ.0.4 ಶುಲ್ಕ.
- ರೂ 75,000 ಮತ್ತು ಮೇಲ್ಪಟ್ಟ ವಹಿವಾಟಿಗೆ ಗರಿಷ್ಠ ರೂ 300.
- ಗ್ರಾಹಕರಿಗೆ ನೇರ ಎಂಡಿಆರ್ ಶುಲ್ಕವಿಲ್ಲ.
- ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾವಣೆ ಶುಲ್ಕಮುಕ್ತ.
- ತಿಂಗಳಿಗೆ ರೂ 1 ಲಕ್ಷದವರೆಗೆ ಯುಪಿಐ ಸ್ವೀಕರಿಸುವ ಸಣ್ಣ ವ್ಯಾಪಾರಿಗಳಿಗೆ ವಿನಾಯಿತಿ.
- ಕೆಲವು ಅಗತ್ಯ ಸೇವೆಗಳಿಗೆ ರೂ 5ರ ರಿಯಾಯಿತಿ ಎಂಡಿಆರ್.



## ■ ಸುದ್ದಿ ಚುಟುಕು

### ಮಮತಾ ಬೆಂಬಲ ಬೆನ್ನಲ್ಲೇ ಕಾಂಗ್ರೆಸ್ ಅಭ್ಯರ್ಥಿ ಬಂಧನ

● ವಿಕ್ರಮ ವಾಹಿನಿ । ಕೋಲ್ಕತಾ

ಪಶ್ಚಿಮ ಬಂಗಾಳದ ನಂದಿಗ್ರಾಮ ವಿಧಾನಸಭಾ ಉಪಚುನಾವಣೆಗೂ ಮುನ್ನ ರಾಜಕೀಯ ಬೆಳವಣಿಗೆಗಳು ತೀವ್ರಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ಮಿಲನ್ ಪ್ರಧಾನ ಅವರನ್ನು ಹಳೆಯ ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರ ಬಣ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ಘೋಷಿಸಿದ ಕೆಲವೇ ಗಂಟೆಗಳಲ್ಲಿ ಬಂಧನ ನಡೆದಿದೆ.



ನಂದಿಗ್ರಾಮದಲ್ಲಿ ತನ್ನ ಬಣದ ಅಭ್ಯರ್ಥಿಯಾಗಿದ್ದ ಸಂಚಿತಾ ಪ್ರಧಾನ ದೇ ಅವರು ನಾಮಪತ್ರ ಹಿಂಪಡೆದ ಬಳಿಕ ಮಮತಾ ಬ್ಯಾನರ್ಜಿ, ಅಕ್ಟೋಬರ್ 6ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಮಿಲನ್ ಪ್ರಧಾನ ಅವರನ್ನು ಬೆಂಬಲಿಸುವುದಾಗಿ ಘೋಷಿಸಿದ್ದರು. ಇಂಡಿಯಾ ಮೈತ್ರಿಕೂಟವನ್ನು ಬಲಪಡಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ಅವರು ತಿಳಿಸಿದ್ದಾರೆ.

ಸಂಚಿತಾ ಅವರು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರನ್ನು ಭೇಟಿಯಾದ ಬಳಿಕ ನಾಮಪತ್ರ ಹಿಂಪಡೆದಿದ್ದರು. ಇದರ ಬೆನ್ನಲ್ಲೇ ಮಮತಾ ಅವರು ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದರು. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ತಮ್ಮ ಪಕ್ಷ ಮಮತಾ ಅವರ ಬೆಂಬಲವನ್ನು ಕೇಳಿರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**2007ರ ಪ್ರಕರಣ:** ಮಿಲನ್ ಪ್ರಧಾನ ಅವರನ್ನು 2007ರ ನಂದಿಗ್ರಾಮ ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಸಂಬಂಧಿಸಿದ ಹಳೆಯ ಕೊಲೆ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂದು ವರದಿಯಾಗಿದೆ. ಬಂಧನದ ಸಮಯ ಮತ್ತು ಪ್ರಕರಣದ ಹಿನ್ನೆಲೆ ಕುರಿತು ರಾಜಕೀಯ ಚರ್ಚೆ ಆರಂಭವಾಗಿದ್ದು, ಕಾಂಗ್ರೆಸ್ ಈ ಬೆಳವಣಿಗೆಯನ್ನು ಪ್ರಶ್ನಿಸಿದೆ. ಪ್ರಕರಣದ ಸಂಪೂರ್ಣ ವಿವರಗಳು ಇನ್ನಷ್ಟೇ ಸ್ಪಷ್ಟವಾಗಬೇಕಿದೆ.

2007ರ ನಂದಿಗ್ರಾಮ ಭೂಸ್ವಾಧೀನ ವಿರೋಧಿ ಹೋರಾಟವು ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಯಾಗಿತ್ತು. ಈ ಹೋರಾಟದ ಹಿನ್ನೆಲೆಯಲ್ಲೇ ತೃಣಮೂಲ ಕಾಂಗ್ರೆಸ್ ತನ್ನ ರಾಜಕೀಯ ನೆಲೆ ವಿಸ್ತರಿಸಿತ್ತು.

### *ನವಜಾತ ಶಿಶುಗಳಿಗೆ ಒಂದು ಗ್ರಾಂ ಚಿನ್ನದ ಉಂಗುರ*

● ವಿಕ್ರಮ ವಾಹಿನಿ । ಚೆನ್ನೈ

*ಸರ್ಕಾರಿ ಆಸ್ಪತ್ರೆಗಳಲ್ಲಿ ಜನಿಸುವ ನವಜಾತ ಶಿಶುಗಳಿಗೆ ಒಂದು ಗ್ರಾಂ ಚಿನ್ನದ ಉಂಗುರ ನೀಡುವ ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಸೆ.28ರಂದು ಚಾಲನೆ ನೀಡಲಿದ್ದಾರೆ ಎಂದು ರಾಜ್ಯ ಸರ್ಕಾರ ಶುಕ್ರವಾರ ತಿಳಿಸಿದೆ.*

*ಯೋಜನೆಯ ಮೊದಲ ಹಂತದಲ್ಲಿ ಫಲಾನುಭವಿಗಳಿಗೆ ವಿತರಿಸಲು 1.28 ಲಕ್ಷ ಚಿನ್ನದ ಉಂಗುರಗಳನ್ನು ಸಿದ್ಧಪಡಿಸಲಾಗಿದೆ. ಪ್ರತಿಯೊಂದು ಉಂಗುರಕ್ಕೂ ಪ್ರತ್ಯೇಕ ಕ್ರಮ ಸಂಖ್ಯೆ ಇರಲಿದ್ದು, ಹಾಳುಮಾಡಲು ಸಾಧ್ಯವಾಗದ ಪ್ಯಾಕೇಜಿಂಗ್‌ನಲ್ಲಿ ವಿತರಿಸಲಾಗುತ್ತದೆ. ಯೋಜನೆಯ ಪ್ರಯೋಜನ ಪಡೆಯಲು ಫಲಾನುಭವಿಗಳು ತಮಿಳುನಾಡಿನ ಖಾಯಂ ನಿವಾಸಿಗಳಾಗಿರಬೇಕು.*



*ಪ್ರಸಕ್ತ ಹಣಕಾಸು ವರ್ಷದಲ್ಲಿ ಯೋಜನೆಗಾಗಿ ಸರ್ಕಾರ ಹೆಚ್ಚುವರಿಯಾಗಿ ರೂ 217.63 ಕೋಟಿ ಅನುದಾನ ನೀಡಿದ್ದು, ಒಟ್ಟು ಬಜೆಟ್ ರೂ 724 ಕೋಟಿಗೆ ಏರಿಕೆಯಾಗಿದೆ. ಸಚಿವಾಲಯದಲ್ಲಿ ವಿಜಯ್ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಯೋಜನೆಯನ್ನು ವಿಸ್ತರಿಸುವ ನಿರ್ಧಾರ ಕೈಗೊಳ್ಳಲಾಗಿದೆ.*

*ಆರಂಭದಲ್ಲಿ ಸೆ.17ರಂದು ಯೋಜನೆಗೆ ಚಾಲನೆ ನೀಡಲು ಉದ್ದೇಶಿಸಲಾಗಿತ್ತು. ವಿಜಯ್ ಅವರ ಲಂಡನ್ ಪ್ರವಾಸದ ಹಿನ್ನೆಲೆಯಲ್ಲಿ ದಿನಾಂಕ ಮುಂದೂಡಲಾಗಿದೆ.*

*ಅಕ್ಟೋಬರ್ 6ರಂದು ನಡೆಯಲಿರುವ ಉಪಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚೆಂಗಲ್‌ಪಟ್ಟ ಹಾಗೂ ತಿರುಪ್ಪೂರ್ ಜಿಲ್ಲೆಗಳಲ್ಲಿ ಸದ್ಯಕ್ಕೆ ಯೋಜನೆ ಜಾರಿಯಾಗುವುದಿಲ್ಲ ಎಂದು ಸರ್ಕಾರ ತಿಳಿಸಿದೆ.*

## ಫೋನ್ ಕರೆ ಸ್ವೀಕರಿಸದ ಪತ್ನಿ ಕೊಲೆ; ಪತಿ ಬಂಧನ

● ವಿಕ್ರಮ ವಾಹಿನಿ । ಬೆಂಗಳೂರು

ಪತ್ನಿ ಫೋನ್ ಕರೆ ಸ್ವೀಕರಿಸಲಿಲ್ಲ ಎಂಬ ಕಾರಣಕ್ಕೆ ಪತಿಯೇ ಆಕೆಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿ, ಸಾಕ್ಷ್ಯ ನಾಶಕ್ಕೆ ಯತ್ನಿಸಿರುವ ಘಟನೆ ಮೈಕೋ ಲೇಔಟ್ ಠಾಣಾ ವ್ಯಾಪ್ತಿಯ ಬಿಳೇಕಹಳ್ಳಿಯಲ್ಲಿ ನಡೆದಿದೆ.

ಗುಂಜಾ ಮದೇಷಿಯಾ (38) ಕೊಲೆಯಾದ ಮಹಿಳೆ. ಆಕೆಯ ಪತಿ ರಂಜಿತ್ ಕುಮಾರ್ ಗುಪ್ತಾ ಬಂಧಿತ ಆರೋಪಿ. ದಂಪತಿಗೆ ಇಬ್ಬರು ಮಕ್ಕಳಿದ್ದು, ಬಿಳೇಕಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ದಂಪತಿ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ.

ಮಕ್ಕಳು ಶಾಲೆಗೆ ತೆರಳಿದ ಬಳಿಕ ದಂಪತಿ ನಡುವೆ ಮತ್ತೆ ಜಗಳ ನಡೆದಿದೆ. ಈ ವೇಳೆ ರಂಜಿತ್ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ಬಳಿಕ ಕುದಿಯುವ ಎಣ್ಣೆ ಸುರಿದು ಶವವನ್ನು ವಿರೂಪಗೊಳಿಸಿ, ಘಟನೆಗೆ ಬೇರೆ ಸ್ವರೂಪ ನೀಡಲು ಹಾಗೂ ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ಕಾಣಿಸದಿರುವುದನ್ನು ಗಮನಿಸಿದ ನೆರೆಹೊರೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಘಟನೆ ಬೆಳಕಿಗೆ ಬಂದಿದೆ. ವಿಚಾರಣೆ ವೇಳೆ ರಂಜಿತ್ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎನ್ನಲಾಗಿದ್ದು, ಮೈಕೋ ಲೇಔಟ್ ಪೊಲೀಸರು ಆತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

**ಮಕ್ಕಳು ಅನಾಥ:** ತಾಯಿಯನ್ನು ಕಳೆದು ಕೊಂಡಿರುವ ಇಬ್ಬರು ಮಕ್ಕಳು ಇದೀಗ ತಂದೆಯೂ ಬಂಧನಕ್ಕೊಳಗಾಗಿರುವ ಹಿನ್ನೆಲೆಯಲ್ಲಿ ಅತಂತ್ರರಾಗಿದ್ದಾರೆ. ಪ್ರಕರಣದ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಪತ್ನಿಯ ಸಾವಿನ ಪ್ರಕರಣದಲ್ಲಿ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಘಟನೆಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದ್ದಾರೆ.

## ಕನಿಷ್ಠ ವೇತನ ಜಾರಿಗೆ ತಡೆ ನೀಡಿದ್ದ 3 ಸುತ್ತೋಲೆಗಳಿಗೆ ಹೈಕೋರ್ಟ್ ತಡೆ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಸರ್ಕಾರ ಪರಿಷ್ಕರಿಸಿದ್ದ ಕನಿಷ್ಠ ವೇತನ ಪಾವತಿಯನ್ನು ಸ್ಥಗಿತಗೊಳಿಸಿ ಲೆಕ್ಕಪರಿಶೋಧನಾ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಹಾಗೂ ಪಂಚಾಯತ್ ರಾಜ್ ಇಲಾಖೆ ಹೊರಡಿಸಿದ್ದ ಮೂರು ಪ್ರತ್ಯೇಕ ಸುತ್ತೋಲೆಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕನಿಷ್ಠ ವೇತನ ಪರಿಷ್ಕರಣೆ ಅಧಿಸೂಚನೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಟಿ. ನರೇಂದ್ರ ಪ್ರಸಾದ್ ಅವರ ಪೀಠ ಈ ಆದೇಶ ನೀಡಿದೆ. ಮುಂದಿನ ವಿಚಾರಣೆಯನ್ನು ಸೆ.21ಕ್ಕೆ ಮುಂದೂಡಲಾಗಿದೆ.



**83 ಉದ್ಯೋಗಗಳಿಗೆ ವೇತನ ಪರಿಷ್ಕರಣೆ**

ರಾಜ್ಯ ಸರ್ಕಾರ 2026ರ ಮೇ 22ರಂದು ರಾಜ್ಯದ 83 ನಿಗದಿತ ಉದ್ಯೋಗಗಳಿಗೆ ಕನಿಷ್ಠ ವೇತನ ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿತ್ತು. ಬಳಿಕ ಹಣಕಾಸು ಇಲಾಖೆ ಜುಲೈ 15ರಂದು ಆಕ್ಷೇಪ ವ್ಯಕ್ತಪಡಿಸಿ, ಹೆಚ್ಚುವರಿ ಹಣಕಾಸಿನ ಹೊರೆ ಹಾಗೂ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಪರಿಷ್ಕೃತ ವೇತನ ಜಾರಿ ಸ್ಥಗಿತಗೊಳಿಸುವಂತೆ ಶಿಫಾರಸು ಮಾಡಿತ್ತು.

ಇದನ್ನು ಆಧರಿಸಿ ಲೆಕ್ಕಪರಿಶೋಧನಾ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಹಾಗೂ ಪಂಚಾಯತ್ ರಾಜ್ ಇಲಾಖೆ ಪ್ರತ್ಯೇಕ ಸುತ್ತೋಲೆ ಹೊರಡಿಸಿ ಪರಿಷ್ಕೃತ ಕನಿಷ್ಠ ವೇತನ ಪಾವತಿಯನ್ನು ಸ್ಥಗಿತಗೊಳಿಸಿದ್ದವು.

**ಕಾರ್ಮಿಕ ಸಂಘಟನೆಗಳ ಆಕ್ಷೇಪ**

ಸುತ್ತೋಲೆಗಳು ಕಾನೂನು ಬಾಹಿರವಾಗಿದ್ದು, ಸರ್ಕಾರದ ಅಧಿಸೂಚನೆಯಂತೆ ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನ ನೀಡಬೇಕು ಎಂದು ಸಿಐಟಿಯು ಹಾಗೂ ಅದರ ಅಂಗ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ಸುತ್ತೋಲೆಗಳು ಸಂವಿಧಾನದ ವಿಧಿ 14, 21 ಮತ್ತು 23ರಲ್ಲಿ ಖಾತರಿಪಡಿಸಿರುವ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿವೆ ಎಂದು ಅರ್ಜಿದಾರರ ಪರ ವಕೀಲ ಎಲ್. ಮುರಳೀಧರ ಪೇಶ್ವಾ ವಾದಿಸಿದರು.

ಪರಿಷ್ಕೃತ ಕನಿಷ್ಠ ವೇತನ ಪಾವತಿ ಸ್ಥಗಿತಗೊಳಿಸಿದ್ದ ಮೂರು ಸುತ್ತೋಲೆಗಳಿಗೆ ಹೈಕೋರ್ಟ್ ತಡೆ ನೀಡಿರುವುದರಿಂದ, ಸರ್ಕಾರದ ಕನಿಷ್ಠ ವೇತನ ಅಧಿಸೂಚನೆಯ ಜಾರಿಗೆ ಸಂಬಂಧಿಸಿದ ಮುಂದಿನ ಕ್ರಮಗಳು ಕುತೂಹಲ ಮೂಡಿಸಿವೆ.

## ಹಾಲಿನ ದರ ಲೀಟರ್‌ಗೆ 8ರೂ ಹೆಚ್ಚಳ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯದಲ್ಲಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ ರೂ 8 ಹೆಚ್ಚಿಸುವಂತೆ ಕರ್ನಾಟಕದ 16 ಹಾಲು ಉತ್ಪಾದಕರ ಒಕ್ಕೂಟಗಳು ಸರ್ಕಾರವನ್ನು ಒತ್ತಾಯಿಸಿವೆ. ದರ ಪರಿಷ್ಕರಣೆಗೆ ಸರ್ಕಾರಕ್ಕೆ ಮೂರು ದಿನಗಳ ಗಡುವು ನೀಡಿರುವ ಒಕ್ಕೂಟಗಳು, ಬೇಡಿಕೆ ಈಡೇರದಿದ್ದರೆ 'ವಿಧಾನಸೌಧ ಚಲೋ' ನಡೆಸುವುದಾಗಿ ಎಚ್ಚರಿಸಿವೆ.

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಮೂಲ್ ಅಧ್ಯಕ್ಷರು, ಕಳೆದ ಎಂಟು ತಿಂಗಳಿಂದ ದರ ಹೆಚ್ಚಳಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದರೂ ಸ್ಪಂದನೆ ದೊರೆತಿಲ್ಲ ಎಂದು ಹೇಳಿದರು.

ಮಳೆ ಕೊರತೆಯಿಂದ ಮೇವಿನ ಅಭಾವ ಉಂಟಾಗಿದ್ದು, ಹಿಂಡಿ, ಬೂಸಾ, ಮೆಕ್ಕೆಜೋಳ ಹಾಗೂ ಕಾಕಂಬಿ ಸೇರಿದಂತೆ ಪಶು ಆಹಾರದ ದರ ಸುಮಾರು ಶೇ.25ರಷ್ಟು ಹೆಚ್ಚಾಗಿದೆ. ರಾಸುಗಳ ನಿರ್ವಹಣೆ ಮತ್ತು ಹಾಲಿನ ಸಾಗಣೆ ವೆಚ್ಚವೂ ಏರಿಕೆಯಾಗಿದೆ. ಪರಿಣಾಮ ರಾಜ್ಯದ ದೈನಂದಿನ ಹಾಲು ಉತ್ಪಾದನೆ 1.11 ಕೋಟಿ ಲೀಟರ್‌ನಿಂದ 1.05 ಕೋಟಿ ಲೀಟರ್‌ಗೆ ಕುಸಿದಿದ್ದು, ಸುಮಾರು 6 ಲಕ್ಷ ಲೀಟರ್ ಕೊರತೆಯಾಗಿದೆ ಎಂದು ಒಕ್ಕೂಟಗಳು ತಿಳಿಸಿವೆ. ಹಾಲಿನ ಮಾರುಕಟ್ಟೆ ದರವನ್ನು ರೂ 8 ಹೆಚ್ಚಿಸುವುದರ ಜತೆಗೆ, ರೈತರಿಗೆ ನೀಡುವ ಪ್ರೋತ್ಸಾಹಧನವನ್ನು ರೂ 5ರಿಂದ ರೂ 8ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಲಾಗಿದೆ. ತಕ್ಷಣ ತುರ್ತು ಸಚಿವ ಸಂಪುಟ ಸಭೆ ಕರೆದು ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ರಾಜ್ಯದ ಹಾಲು ಉತ್ಪಾದಕರು ಒಗ್ಗೂಡಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

## ಮೋದಿಗೆ ಯುಎಇ ಅಧ್ಯಕ್ಷರ ಕರೆ; ಸಮರ ಸಮಸ್ಯೆ ಚರ್ಚೆ


● ವಿಕ್ರಮ ವಾಹಿನಿ । ನವದೆಹಲಿ



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಶುಕ್ರವಾರ ದೂರವಾಣಿ ಕರೆ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಪಶ್ಚಿಮ ಏಷ್ಯಾದ ಬೆಳವಣಿಗೆಗಳು ಹಾಗೂ ಭಾರತ–ಯುಎಇ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಉಭಯ ನಾಯಕರು ಚರ್ಚಿಸಿದರು.

ಇಂಧನ, ರಕ್ಷಣೆ, ತಂತ್ರಜ್ಞಾನ, ಹೂಡಿಕೆ ಮತ್ತು ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತ–ಯುಎಇ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಗಾಢಗೊಳಿಸುವ ಹೊಸ ಕ್ರಮಗಳ ಕುರಿತು ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು.

ಪಶ್ಚಿಮ ಏಷ್ಯಾದ ಬೆಳವಣಿಗೆಗಳ ಬಗ್ಗೆಯೂ ಚರ್ಚಿಸಿದ ಉಭಯ ನಾಯಕರು, ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತೇಜಿಸುವ ಪ್ರಯತ್ನಗಳಲ್ಲಿ ನಿರಂತರ ಸಹಕಾರ ಹಾಗೂ ಸಮನ್ವಯ ಮುಂದುವರಿಸುವ ಬದ್ಧತೆಯನ್ನು ಪುನರುಚ್ಚರಿಸಿದರು.



ಯುಎಇ ಅಧ್ಯಕ್ಷರು ಭಾರತದ ಯಶಸ್ವಿ ಬ್ರಿಕ್ಸ್ ಅಧ್ಯಕ್ಷತೆಯನ್ನೂ ಶ್ಲಾಘಿಸಿ ಪ್ರಧಾನಿಗೆ ಅಭಿನಂದನೆ ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಪ್ರಧಾನಿ ಮೋದಿ, ಯುಎಇಯ ಸಹಕಾರವನ್ನು ಪ್ರಶಂಸಿಸಿದರು. ಬಳಿಕ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಮೋದಿ, ಯುಎಇ ಅಧ್ಯಕ್ಷರ ಕರೆ ಹಾಗೂ ಶುಭಾಶಯಗಳಿಗೆ ಕೃತಜ್ಞತೆ ಸಲ್ಲಿಸಿ, ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಬಲಪಡಿಸುವ ಕುರಿತು ಚರ್ಚಿಸಿರುವುದಾಗಿ ತಿಳಿಸಿದ್ದಾರೆ.

ಉಭಯ ರಾಷ್ಟ್ರಗಳ ನಡುವಿನ ಆರ್ಥಿಕ ಹಾಗೂ ವ್ಯಾಪಾರ ಸಂಬಂಧಗಳನ್ನು ಮತ್ತಷ್ಟು ವಿಸ್ತರಿಸುವುದು, ಹೂಡಿಕೆ ಅವಕಾಶಗಳನ್ನು ಹೆಚ್ಚಿಸುವುದು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ಬಲಪಡಿಸುವ ಬಗ್ಗೆಯೂ ಮಾತುಕತೆಯಲ್ಲಿ ಗಮನ ಹರಿಸಲಾಯಿತು.

ಭಾರತ ಹಾಗೂ ಯುಎಇ ನಡುವಿನ ದ್ವಿಪಕ್ಷೀಯ ಸಂಬಂಧಗಳು ಹಲವು ಕ್ಷೇತ್ರಗಳಲ್ಲಿ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲೂ ಉನ್ನತ ಮಟ್ಟದ ಸಂಪರ್ಕ ಮತ್ತು ಸಮನ್ವಯ ಮುಂದುವರಿಸುವ ಕುರಿತು ಉಭಯ ನಾಯಕರು ಅಭಿಪ್ರಾಯ ಹಂಚಿಕೊಂಡರು.

## ವಾಯುಪಡೆಗೆ ಹೆಚ್‌ಎಎಲ್‌ನ ಸ್ವದೇಶಿ ಬಲ

### ■ ತೇಜಸ್, ಎಚ್‌ಟಿಟಿ-40 ತರಬೇತಿ ವಿಮಾನ, ಧ್ರುವ್ ಎನ್‌ಜಿ ಹೆಲಿಕಾಪ್ಟರ್‌ಗಳ ಹಸ್ತಾಂತರ ■

● ವಿಕ್ರಮ ವಾಹಿನಿ । ಬೆಂಗಳೂರು

ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್) ದೇಶೀಯವಾಗಿ ಅಭಿವೃದ್ಧಿಪಡಿಸಿದ ಹಲವು ಅತ್ಯಾಧುನಿಕ ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸುವ ಮೂಲಕ ಸ್ವದೇಶಿ ರಕ್ಷಣಾ ಉತ್ಪಾದನೆಗೆ ಮತ್ತಷ್ಟು ಬಲ ನೀಡಿದೆ. ಎರಡು ಎಲ್‌ಸಿಎ ತೇಜಸ್, ಎಫ್‌ಒಸಿ ಟ್ವಿನ್ ಸೀಟರ್ ತರಬೇತಿ ವಿಮಾನ, ಎಚ್‌ಟಿಟಿ-40 ಬೇಸಿಕ್ ಟ್ರೈನರ್ ವಿಮಾನಗಳು ಹಾಗೂ ನಾಲ್ಕು ಧ್ರುವ್ ನೆಕ್ಸ್ಟ್ ಜನರೇಷನ್ (ಎನ್‌ಜಿ) ಹೆಲಿಕಾಪ್ಟರ್‌ಗಳನ್ನು ಹಸ್ತಾಂತರಿಸಲಾಯಿತು.

ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಹಾಗೂ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸ್ವದೇಶಿ ತಂತ್ರಜ್ಞಾನದಲ್ಲಿ ತಯಾರಾದ ವಿಮಾನಗಳ ಸಾಮರ್ಥ್ಯ ಮತ್ತು ಕಾರ್ಯಾಚರಣಾ ಸಿದ್ಧತೆಯನ್ನು ಪರಿಶೀಲಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಲಘು ಯುದ್ಧ ವಿಮಾನಗಳ ಹಸ್ತಾಂತರದ ಹಿನ್ನೆಲೆಯಲ್ಲಿ ವಿಘ್ನ ವಿನಾಯಕ ಹಾಗೂ ಶ್ರೀರಾಮನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಧ್ರುವ್ ಎನ್‌ಜಿ ಹೆಲಿಕಾಪ್ಟರ್‌ಗೆ ತೆರಳಿ ಅದರ ವೈಶಿಷ್ಟ್ಯಗಳು ಹಾಗೂ ಕಾರ್ಯಾಚರಣಾ ವ್ಯವಸ್ಥೆಗಳ ಕುರಿತು ಪರಿಶೀಲಿಸಿದರು.



**ಭಾರತೀಯ ವಾಯುಪಡೆಗೆ ಹೆಚ್‌ಎಎಲ್ ನಿರ್ಮಿತ 2 ಎಲ್‌ಸಿಎ ತೇಜಸ್, ಎಫ್‌ಒಸಿ ಟ್ವಿನ್ ಸೀಟರ್ ತರಬೇತಿ ವಿಮಾನ, ಎಚ್‌ಟಿಟಿ-40 ಬೇಸಿಕ್ ಟ್ರೈನರ್ ಹಾಗೂ 4 ಧ್ರುವ್ ಎನ್‌ಜಿ ಹೆಲಿಕಾಪ್ಟರ್‌ಗಳ ಹಸ್ತಾಂತರ; ರೂ 6,838 ಕೋಟಿ ವೆಚ್ಚದಲ್ಲಿ 70 ಎಚ್‌ಟಿಟಿ-40 ವಿಮಾನಗಳ ಖರೀದಿಗೆ ಒಪ್ಪಂದ.**

**ಎಚ್‌ಟಿಟಿ-40ಗೆ ರೂ 6,838 ಕೋಟಿ ಒಪ್ಪಂದ**

ಭಾರತೀಯ ವಾಯುಪಡೆಯ ತರಬೇತಿ ಅಗತ್ಯಗಳನ್ನು ಪೂರೈಸಲು 70 ಎಚ್‌ಟಿಟಿ-40 ಹಿಂದೂಸ್ಥಾನ್ ಟರ್ಬೋ ಟ್ರೈನರ್ ವಿಮಾನಗಳಿಗಾಗಿ ಹೆಚ್‌ಎಎಲ್ ಜತೆ ರೂ 6,838 ಕೋಟಿ ಮೊತ್ತದ ಒಪ್ಪಂದ ಮಾಡಿಕೊಳ್ಳಲಾಗಿದೆ. ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಈ ತರಬೇತಿ ವಿಮಾನಗಳು ವಾಯುಪಡೆಯ ಪೈಲಟ್‌ಗಳ ತರಬೇತಿಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಹಸ್ತಾಂತರವು ದೇಶೀಯ ರಕ್ಷಣಾ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವ ಪ್ರಯತ್ನಗಳಿಗೆ ಉತ್ತೇಜನ ನೀಡಲಿದೆ. ಖಾಸಗಿ ಸಂಸ್ಥೆ ಪವನ್ ಹನ್ಸ್‌ಗೂ ಧ್ರುವ್ ಎನ್‌ಜಿ ಹೆಲಿಕಾಪ್ಟರ್‌ಗಳನ್ನು ಹಸ್ತಾಂತರಿಸಲಾಗಿದ್ದು, ಸ್ವದೇಶಿ ವೈಮಾನಿಕ ಉತ್ಪನ್ನಗಳ ಬಳಕೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಇದನ್ನು ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಹೆಚ್‌ಎಎಲ್‌ನ ಸ್ವದೇಶಿ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳ ಸೇರ್ಪಡೆಯಿಂದ ವಾಯುಪಡೆಯ ತರಬೇತಿ ಮತ್ತು ಕಾರ್ಯಾಚರಣಾ ಸಾಮರ್ಥ್ಯ ಮತ್ತಷ್ಟು ಹೆಚ್ಚುವ ನಿರೀಕ್ಷೆಯಿದೆ.

ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ತಂತ್ರಜ್ಞಾನ ಹಾಗೂ ಉತ್ಪಾದನೆಗೆ ಒತ್ತು ನೀಡುವ ಆತ್ಮನಿರ್ಭರ ಭಾರತ ಅಭಿಯಾನಕ್ಕೂ ಈ ಬೆಳವಣಿಗೆ ಉತ್ತೇಜನ ನೀಡಲಿದೆ.

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481
ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

### ನುಡಿ ವಾಹಿನಿ

ಸಂಸ್ಕಾರ ಹೇಳಲು ಸನ್ಯಾಸ ಬೇಕಿಲ್ಲ.., ಅನುಭಾವ ಹೇಳಲು ಪದವಿ ಬೇಕಿಲ್ಲ.., ಸೇವೆ ಮಾಡಲು ಅಧಿಕಾರ ಅಂತಸ್ತು ಬೇಕಿಲ್ಲ.., ಹೇಳುವ ಜ್ಞಾನ, ಮಾಡುವ ಮನವೊಂದಿದ್ದರೆ ಸಾಕು ಸಕಲ ಕಾರ್ಯಸಿದ್ಧಿಗೆ...!!

### ದಿನ ಪಂಚಾಂಗ

ಸೆಪ್ಟೆಂಬರ್, 19–2026, ಶನಿವಾರ ವರ್ಷ ಋತು, ಭಾದ್ರಪದ ಮಾಸ, ಶುದ್ಧ ಪಕ್ಷ
ಅಷ್ಟಮಿ ತಿಥಿ ಮ.1:59
ಮೂಲ ನಕ್ಷತ್ರ ರಾ.1:28
ರಾಹುಕಾಲ ಬೆ 9:11–10:42
ರಾಧಾ ಜಯಂತಿ, ಸಿದ್ಧಲಕ್ಷ್ಮಿ–ಮಹಾಲಕ್ಷ್ಮಿ ವ್ರತ, ದೂರ್ವಾಷ್ಟಮಿ, ಜ್ಯೇಷ್ಠಾಲಕ್ಷ್ಮಿ ವಿಸರ್ಜನೆ, ಕೊಲ್ಹಾಪುರ ಬಸದಿ ರಥ

### ಆಧ್ಯಾತ್ಮ

# 'ಬಾಯಾರಿದವರಿಗೆ ನೀರು ನೀಡುವುದು ಶ್ರೇಷ್ಠ ಯಜ್ಞ'



● ವಿಕ್ರಮ ವಾಹಿನಿ । ಗೋಕರ್ಣ

ಮಾನವನ ದೈನಂದಿನ ಜೀವನದಲ್ಲಿ ನೀರು ಕೇವಲ ದಾಹ ತಣಿಸುವ ದ್ರವವಲ್ಲ. ಅದು ಶರೀರದ ಆರೋಗ್ಯವನ್ನು ಕಾಯ್ದುಕೊಳ್ಳುವ ದಿವ್ಯ ಔಷಧ ಹಾಗೂ ಪರಮ ಧರ್ಮ ಸಾಧನ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ 18.09.2026 ರಂದು 'ಅನ್ನಂ ಬ್ರಹ್ಮ' ಮಾಲಿಕೆಯಲ್ಲಿ ಪ್ರವಚನ ಅನುಗ್ರಹಿಸಿದ ಶ್ರೀಗಳು, ಯಜ್ಞ – ತಪಸ್ಸು – ವ್ರತಗಳನ್ನು ಮಾಡದೇ ಇದ್ದರೂ ಬಾಯಾರಿದವರಿಗೆ ನೀರನ್ನು ದಾನ ಮಾಡಿದವನು ಸ್ವರ್ಗವನ್ನು ಪಡೆಯುತ್ತಾನೆ. ಬಾಯಾರಿದವರಿಗೆ ನೀರು ನೀಡುವುದು ಮತ್ತೊಬ್ಬರ ಜಠರಾಗ್ನಿಗೆ ಜಲವನ್ನು ಆಹುತಿಯಾಗಿ ನೀಡುವ ಯಜ್ಞದಂತೆ. ಬೇಸಿಗೆಯಲ್ಲಿ ದಾರಿಹೋಕರಿಗೆ ನೀರನ್ನು ಒದಗಿಸುವುದು, ಬಾವಿ ಹಾಗೂ ಕೆರೆಗಳನ್ನು ನಿರ್ಮಿಸುವುದು ಶ್ರೇಷ್ಠ ಧರ್ಮ ಕಾರ್ಯ ಎಂದು ಧರ್ಮ ಶಾಸ್ತ್ರವನ್ನು ಆಧರಿಸಿ ಅಭಿಪ್ರಾಯ ವ್ಯಕ್ತಪಡಿಸಿದರು.

ಜೀವನದಲ್ಲಿ ದೊರೆಯುವ ಅಪರೂಪದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಶ್ರೀಗಳು, ಸ್ವಾತಿ ನಕ್ಷತ್ರದ ಮಳೆಯ ನೀರಿನ ಕುರಿತಾಗಿ ವಿವರಿಸುತ್ತಾ, ಇದು ಜೀರ್ಣಕ್ಕೆ ಲಘು, ದೇಹಕ್ಕೆ ಪಥ್ಯಕರ ಹಾಗೂ ದೀರ್ಘಕಾಲದವರೆಗೆ ಕೆಡದಂತೆ ಉಳಿಯುವ ದಿವ್ಯಗುಣವನ್ನು ಸ್ವಾತಿ ಮಳೆ ನೀರು ಹೊಂದಿರುತ್ತದೆ. ವರ್ಷಗಳ ಕಾಲ ಇದನ್ನು ಸಂಗ್ರಹಿಸಿದರೂ ಈ ನೀರಿನಲ್ಲಿ ಸೂಕ್ಷ್ಮ ಜೀವಿಗಳು ಉತ್ಪತ್ತಿಯಾಗುವುದಿಲ್ಲ ಎಂದು ಆಧುನಿಕ ವಿಜ್ಞಾನವೂ ಒಪ್ಪಿದೆ ಎಂದರು.

ಗಂಗಾ ನದಿಯ ನೀರಿನ ಸಂಸರ್ಗದಿಂದ ಪಾಪ ಪರಿಹಾರದ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಶ್ರೀಗಳು,

ಪಶ್ಚಾತ್ತಾಪ ಇರುವವನಿಗೆ ಮಾತ್ರ ಪ್ರಾಯಶ್ಚಿತ್ತ ಮಾಡುವ ಅಧಿಕಾರ ಇರುವುದಾಗಿದೆ. ಮಾಡಿದ ತಪ್ಪನ್ನು ಅರಿತು ಪುನಃ ತಪ್ಪನ್ನು ಮಾಡದಿರುವ ದೃಢಸಂಕಲ್ಪವೇ ಪ್ರಾಯಶ್ಚಿತ್ತವಾಗಿದ್ದು, ಆ ಮನಸ್ಸಿನಿಂದ ಮಾಡಿದ ಗಂಗಾ ಸ್ನಾನದಿಂದ ಮಾತ್ರ ಪಾಪ ಪರಿಹಾರವಾಗುತ್ತದೆ ಎಂದು ಉತ್ತರಿಸಿದರು.

ಆನಂದ ಭಟ್ ಕುಟುಂಬದವರು ಗುರುಭಿಕ್ಷಾ ಸೇವೆಯನ್ನು ಸಮರ್ಪಿಸಿದರು. ದಿನಪ್ರಧಾನರಾಗಿ ರಾಮಚಂದ್ರರಾವ್ ಗಾಜಿನ ದಂಪತಿಗಳು ಉಪಸ್ಥಿತರಿದ್ದರು.

ಮಡಿವಾಳ ಸಮಾಜದಿಂದ ಸ್ವರ್ಣಪಾದುಕಾ ಪೂಜೆ: ಶ್ರೀರಾಮಚಂದ್ರಾಪುರ ಮಠಕ್ಕೆ ತಲೆತಲಾಂತರದಿಂದ ನಡೆದುಕೊಳ್ಳುವ ಮಡಿವಾಳ ಸಮಾಜದಿಂದ ಸ್ವರ್ಣಪಾದುಕಾ ಪೂಜೆ ನಡೆಯಿತು. ಪಾದುಕಾ ಪೂಜೆ ಸ್ವೀಕರಿಸಿ ಮಾತನಾಡಿದ ಶ್ರೀಗಳು, ಮಡಿವಾಳ ಸಮಾಜವು ಸಂಘಟಿತವಾಗುವ ಮೂಲಕ ಹೆಚ್ಚಿನ ಒಳಿತನ್ನು ಪಡೆಯುವಂತಾಗಲಿ. ಸಮಾಜದ ಜೊತೆಗೆ ಗುರುಪೀಠ ಸದಾ ಇರಲಿದ್ದು, ಸಮಾಜದ ಕಷ್ಟ – ನಷ್ಟಗಳು ದೂರವಾಗಲಿ ಎಂದು ಆಶೀರ್ವದಿಸಿದರು. ಮಂಜುನಾಥ ಮಡಿವಾಳ, ಸದಾನಂದ ಮಡಿವಾಳ, ಮಂಜುನಾಥ ಬಿಳಗಿ, ರಮಾನಂದ ಮಡಿವಾಳ ಸೇರಿದಂತೆ ಸಮಾಜದ ಬಂಧುಗಳು ಉಪಸ್ಥಿತರಿದ್ದರು.

# ಹತಾರ ಸೇವೆ, ಹೇಳಿಕೆ, ಸುತಗಾಯಿ ಒಡೆಯುವಿಕೆ

**ಹತಾರ ಸೇವೆ, ಸುತಗಾಯಿ ಒಡೆಯುವಿಕೆ, ಮಳೆ–ಬೆಳೆ ಕುರಿತು 'ಹೇಳಿಕೆ' ಹಾಗೂ ಪಲ್ಲಕ್ಕಿ, ರಥೋತ್ಸವದ ವೈಭವದೊಂದಿಗೆ ಬಾಗಲಕೋಟೆ ಜಿಲ್ಲೆಯ ತಿಮ್ಮಾಪೂರದ ಮಾರುತೇಶ್ವರ–ಬಸವೇಶ್ವರ ಜಾತ್ರೆ ಸೆ.19ರಿಂದ 21ರವರೆಗೆ ನಡೆಯಲಿದೆ. ಉತ್ತರ ಕರ್ನಾಟಕದ ಅಪೂರ್ವ ಜಾನಪದ ಪರಂಪರೆ, ಭಕ್ತಿ ಮತ್ತು ಗ್ರಾಮೀಣ ಸಂಸ್ಕೃತಿಯ ಸೊಬಗನ್ನು ಸಾರುವ ಈ ಜಾತ್ರೆ ಭಕ್ತರನ್ನು ಆಕರ್ಷಿಸಲಿದೆ.**

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ತಿಮ್ಮಾಪೂರ ಗ್ರಾಮ. ಗಾತ್ರದಲ್ಲಿ ಪುಟ್ಟದಾದರೂ ಪರಂಪರೆ, ನಂಬಿಕೆ ಮತ್ತು ಜಾನಪದ ವೈವಿಧ್ಯದಲ್ಲಿ ದೊಡ್ಡದು. ಗ್ರಾಮದ ಹೃದಯಭಾಗದಲ್ಲಿರುವ ಶ್ರೀ ಮಾರುತೇಶ್ವರ ಹಾಗೂ ಶ್ರೀ ಬಸವೇಶ್ವರ ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಲ್ಲ; ಹಲವು ತಲೆಮಾರುಗಳ ನಂಬಿಕೆ, ಭಕ್ತಿ, ಸಾಮುದಾಯಿಕ ಬದುಕು ಹಾಗೂ ಗ್ರಾಮೀಣ ಸಂಸ್ಕೃತಿಯ ಜೀವಂತ ಪ್ರತೀಕಗಳಾಗಿವೆ.

ಇಲ್ಲಿನ ಜಾತ್ರೆ ಎಂದರೆ ಸಾಮಾನ್ಯ ಜಾತ್ರೆಯಲ್ಲ. ಹತಾರ ಸೇವೆ, ಸುತಗಾಯಿ ಒಡೆಯುವಿಕೆ, ಪಲ್ಲಕ್ಕಿ ಉತ್ಸವ, ಭವಿಷ್ಯದ ಮಳೆ–ಬೆಳೆ ಕುರಿತು 'ಹೇಳಿಕೆ', ರಥೋತ್ಸವ ಸೇರಿದಂತೆ ಹಲವು ವಿಶಿಷ್ಟ ಆಚರಣೆಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಅಪರೂಪದ ಉತ್ಸವ. ಇದೇ ಕಾರಣಕ್ಕೆ ತಿಮ್ಮಾಪೂರದ ಮಾರುತೇಶ್ವರ–ಬಸವೇಶ್ವರ ಜಾತ್ರೆ ಸುತ್ತಮುತ್ತಲಿನ ಗ್ರಾಮಗಳಷ್ಟೇ ಅಲ್ಲದೆ ದೂರದ ಪ್ರದೇಶಗಳ ಭಕ್ತರನ್ನೂ ಸೆಳೆಯುತ್ತದೆ. ಈ ಬಾರಿ ಸೆ. 19ರಿಂದ 21ರವರೆಗೆ ಮೂರು ದಿನಗಳ ಕಾಲ ಜಾತ್ರೆ ವಿಜೃಂಭಣೆಯಿಂದ ನಡೆಯಲಿದೆ.

**ಎರಡು ದೇವರು, ಒಂದು ಭಕ್ತಿಯ ಸಂಭ್ರಮ**

ತಿಮ್ಮಾಪೂರದ ವಿಶೇಷತೆ ಎಂದರೆ ಒಂದೇ ಜಾತ್ರೆಯಲ್ಲಿ ಮಾರುತೇಶ್ವರ ಮತ್ತು ಬಸವೇಶ್ವರರ ಆರಾಧನೆ ನಡೆಯುವುದು. ದೇವಾಲಯದ ಒಂದು ಬದಿಯಲ್ಲಿ ಸಂಗಮೋರಿ ಕಲ್ಲಿನಿಂದ ನಿರ್ಮಿಸಲಾದ ಶ್ರೀ ಮಾರುತೇಶ್ವರನ ಗರ್ಭಗುಡಿ, ಎದುರು ದೀಪಸ್ತಂಭ ಹಾಗೂ ಪಕ್ಕದಲ್ಲಿ ಶ್ರೀ ಬಸವೇಶ್ವರನ ಗುಡಿ ಇದೆ. ಸಮೀಪದಲ್ಲಿಯೇ ಪವಾಡ ಪುರುಷರ ಕಟ್ಟೆಗಳು ಮತ್ತು ಶಿವಶರಣೆ ಹೇಮರಡ್ಡಿ ಮಲ್ಲಮ್ಮನ ಸನ್ನಿಧಿಯೂ ಇದೆ.

ತಿಮ್ಮಾಪೂರ ಮಾತ್ರವಲ್ಲದೆ ಕಿರಸೂರ, ಹಡಗಲಿ ಮುಂತಾದ ಗ್ರಾಮಗಳಲ್ಲಿಯೂ ಹನುಮಂತ ಹಾಗೂ ಬಸವಣ್ಣನ ಆರಾಧನೆಯೊಂದಿಗೆ ಜಾತ್ರಾ ಪರಂಪರೆ ಬೆಸೆದುಕೊಂಡಿದೆ. ಒಂದರ ನಂತರ ಮತ್ತೊಂದು ಗ್ರಾಮದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳು ಈ ಭಾಗದ ಗ್ರಾಮೀಣ ಸಾಂಸ್ಕೃತಿಕ ಜಾಲವನ್ನು ಇನ್ನಷ್ಟು ಗಟ್ಟಿಗೊಳಿಸಿವೆ.

**ಮಾರುತೇಶ್ವರ ಇಲ್ಲಿಗೆ ಬಂದ ಕಥೆ**

ಮಾರುತೇಶ್ವರನ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಹಲವು ತಲೆಮಾರುಗಳಿಂದ ಹಿರಿಯರು ಹೇಳಿಕೊಂಡು ಬಂದಿರುವ ಐತಿಹ್ಯವಿದೆ.

ಹರಪನಹಳ್ಳಿಯ ದೇಸಾಯಿ ಮನೆತನದ ಭಕ್ತರೊಬ್ಬರು ಊರು ಬಿಟ್ಟು ಹೊರಟ ಸಂದರ್ಭದಲ್ಲಿ ಹುನಗುಂದ ತಾಲೂಕಿನ ದಮ್ಮೂರದ ಗುಡ್ಡದ ಬಳಿ ವಿಶ್ರಾಂತಿ ಪಡೆದಿದ್ದರಂತೆ. ಅಲ್ಲಿ ಕಲ್ಲಿನ ಮೇಲೆ ನಿಂತಾಗ ಅವರಿಗೆ ದೃಷ್ಟಿ ಮಂಕಾಯಿತು ಎಂಬ ಪ್ರತೀತಿ. ಬಳಿಕ ಮಾರುತೇಶ್ವರನು ದೈವವಾಣಿಯಾಗಿ, 'ನಾನು ನಿನ್ನೊಂದಿಗೆ ಬರುತ್ತೇನೆ; ನನ್ನನ್ನು ತಿಮ್ಮಾಪೂರಕ್ಕೆ ಕರೆದೊಯ್ಯು' ಎಂದು ಸೂಚಿಸಿದನೆಂಬುದು ಸ್ಥಳೀಯ ನಂಬಿಕೆ.

ಕಲ್ಲನ್ನು ಎತ್ತಿಕೊಂಡು ಬಂದಾಗ ಅದು ಹಗುರವಾಗಿದ್ದು, ತಿಮ್ಮಾಪೂರದ ಸಮೀಪ ಬಂದಾಗ ಭಾರವಾಯಿತು. ಅಲ್ಲಿಯೇ ದೇವರ ಪ್ರತಿಷ್ಠಾಪನೆ ನಡೆಯಿತು ಎಂದು ಹಿರಿಯರು ಹೇಳುತ್ತಾರೆ. ಅಂದಿನಿಂದ ಜಾತ್ರೆಯಲ್ಲಿ ಸಂಗಟಿ ಎಡೆ ಮಾಡುವ ಪರಂಪರೆಯೂ ಮುಂದುವರಿದಿದೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ.

ಇದು ಇತಿಹಾಸದ ದಾಖಲೆಗಿಂತಲೂ ಸ್ಥಳೀಯ ಜನಸ್ಮೃತಿಯಲ್ಲಿ ಜೀವಂತವಾಗಿರುವ ಐತಿಹ್ಯ. ಇಂತಹ ಕಥನಗಳೇ ಗ್ರಾಮೀಣ ದೇವಾಲಯಗಳ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸುತ್ತವೆ.

**ರೋಮಾಂಚನಗೊಳಿಸುವ ಹತಾರ ಸೇವೆ**

ತಿಮ್ಮಾಪೂರ ಜಾತ್ರೆಯ ಪ್ರಮುಖ ಆಕರ್ಷಣೆ ಹತಾರ ಸೇವೆ.ಜಾತ್ರೆಯ ಸಂದರ್ಭದಲ್ಲಿ ಪೂಜಾರಿಗಳು ಹತಾರ ಅಥವಾ ಖಡ್ಗ ಹಿಡಿದು ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸುವುದು ಇಲ್ಲಿನ ಬಹುಕಾಲದ ಪರಂಪರೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಭಕ್ತರ ಸಮ್ಮುಖದಲ್ಲಿ ನಡೆಯುವ ಈ ಆಚರಣೆ ನೋಡುಗರಲ್ಲಿ ರೋಮಾಂಚನ ಮೂಡಿಸುತ್ತದೆ.

ಹಳೆಯ ತಲೆಮಾರಿನಿಂದ ಈ ಆಚರಣೆ ಮುಂದುವರಿದು ಬಂದಿದೆ ಎಂಬ ಪ್ರತೀತಿ ಇದೆ. ದೇವರ ಆರಾಧನೆಯ ಭಾಗವಾಗಿ ಇದನ್ನು ಭಕ್ತಿಯಿಂದ ನೋಡುವ ಜನರು, ಇದನ್ನು ಮಾರುತೇಶ್ವರನ ಕೃಪೆಯ ಸಂಕೇತವೆಂದು ನಂಬುತ್ತಾರೆ.

ಆದರೆ ಇಂತಹ ಆಚರಣೆಗಳನ್ನು ತರಬೇತಿ ಪಡೆದವರೇ, ದೇವಸ್ಥಾನ ಸಮಿತಿಯ ನಿಯಂತ್ರಣ ಮತ್ತು ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಮಾತ್ರ ನಡೆಸುವುದು ಅತ್ಯಗತ್ಯ. ಸಂಪ್ರದಾಯ ಉಳಿಯಬೇಕಾದಷ್ಟೇ ಭಕ್ತರ ಸುರಕ್ಷತೆಯೂ ಮುಖ್ಯ.

**ಸುತಗಾಯಿ ಒಡೆಯುವ ಸಂಭ್ರಮ**

ಜಾತ್ರೆಯ ಮತ್ತೊಂದು ವಿಶಿಷ್ಟ ಆಚರಣೆ ಸುತಗಾಯಿ–ತೆಂಗಿನಕಾಯಿ ಒಡೆಯುವ ಸೇವೆ.ತಮ್ಮ ಇಷ್ಟಾರ್ಥ ನೆರವೇರಲೆಂದು ಭಕ್ತರು ಹರಕೆ ಹೊತ್ತು ನೂರಾರು, ಕೆಲವೊಮ್ಮೆ 101 ತೆಂಗಿನಕಾಯಿಗಳನ್ನು ಅರ್ಪಿಸುವುದು ಇಲ್ಲಿನ ಸಂಪ್ರದಾಯ. ಸಾಯಂಕಾಲ ವಾದ್ಯಮೇಳಗಳೊಂದಿಗೆ ದೇವಾಲಯದ ಪ್ರದಕ್ಷಿಣೆ ನಡೆಯುವ ಸಂದರ್ಭದಲ್ಲಿ ಈ ಸೇವೆ ವಿಶೇಷ ಆಕರ್ಷಣೆಯಾಗುತ್ತದೆ.

ದೇವಾಲಯದ ಎದುರು ಕಂಬಳಿ ಹಿಡಿದು ನಿಂತಿರುವವರ ನಡುವೆ ತೆಂಗಿನಕಾಯಿಗಳನ್ನು ಒಡೆಯಲಾಗುತ್ತದೆ. ನಂತರ ಅವುಗಳನ್ನು ಪ್ರಸಾದವೆಂದು ಹಂಚುವ ಪದ್ಧತಿಯೂ ಇದೆ. ಈ ಕಾರಣದಿಂದ ತಿಮ್ಮಾಪೂರ ಜಾತ್ರೆಗೆ 'ಕಾಯಿ ಜಾತ್ರೆ' ಎಂಬ ಜನಪ್ರಿಯ ಹೆಸರೂ ಬಂದಿರುವುದಾಗಿ ಸ್ಥಳೀಯರು ಹೇಳುತ್ತಾರೆ.

**ಮಳೆ–ಬೆಳೆ ಹೇಳಿಕೆ: ಕುತೂಹಲದ ಕೇಂದ್ರ**

ತಿಮ್ಮಾಪೂರ ಜಾತ್ರೆಯ ಮತ್ತೊಂದು ವಿಶಿಷ್ಟ ಅಂಶ 'ಹೇಳಿಕೆ'.ಊತ್ತರಿ ಮಳೆಯ ಕಾಲ ರೈತರ ಪಾಲಿಗೆ ಮಹತ್ವದ್ದು. ಹಿಂಗಾರು ಬಿತ್ತನೆಗೆ ಭೂಮಿ ಸಿದ್ಧವಾಗುವ ಈ ಸಂದರ್ಭದಲ್ಲಿ ಮಳೆ–ಬೆಳೆ ಹೇಗಿರಬಹುದು ಎಂಬುದರ ಕುರಿತು ಪೂಜಾರಿಗಳು ನುಡಿಯುವ ಹೇಳಿಕೆಯನ್ನು ಸಾವಿರಾರು ಭಕ್ತರು ಕುತೂಹಲದಿಂದ ಆಲಿಸುತ್ತಾರೆ.

ಕಿರಸೂರಿನಿಂದ ಪಲ್ಲಕ್ಕಿ ಹಡಗಲಿ ಕಡೆ ತೆರಳಿ, ನದಿಯಲ್ಲಿ ಸ್ನಾನ ಹಾಗೂ ಪೂಜೆ ಸಲ್ಲಿಸಿದ ಬಳಿಕ ಮುಂಜಾನೆ ಹಡಗಲಿ ಗ್ರಾಮದಲ್ಲಿ ಹೇಳಿಕೆ ನಡೆಯುತ್ತದೆ. ಬಳಿಕ ತಿಮ್ಮಾಪೂರದಲ್ಲಿಯೂ ಸಾಯಂಕಾಲ ಮತ್ತೊಂದು ಹೇಳಿಕೆ ನಡೆಯುವ ಪರಂಪರೆ ಇದೆ.

ಹೇಳಿಕೆಯ ಭಾಷೆ ಸಾಮಾನ್ಯವಾಗಿ ನೇರವಾಗಿರುವುದಿಲ್ಲ. ರೂಪಕ, ಸಂಕೇತ ಮತ್ತು ಜಾನಪದ ಗೂಢಾರ್ಥಗಳ ಮೂಲಕ ಮಳೆ, ಬೆಳೆ, ಕೃಷಿ, ಸಮೃದ್ಧಿ ಮುಂತಾದ ವಿಚಾರಗಳನ್ನು ಸೂಚಿಸಲಾಗುತ್ತದೆ.

ನಂತರ ಗ್ರಾಮಸ್ಥರು ತಮ್ಮದೇ ರೀತಿಯಲ್ಲಿ ಅದರ ಅರ್ಥೈಸಿಕೆ ಮಾಡಿಕೊಳ್ಳುತ್ತಾರೆ.

ಹಿಂದಿನ ವರ್ಷಗಳ ಹೇಳಿಕೆಗಳನ್ನೂ ಸ್ಥಳೀಯರು ಇಂದಿಗೂ ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ. ಕೆಲವು ಹೇಳಿಕೆಗಳು ಮಳೆ–ಬೆಳೆಯೊಂದಿಗೆ ಹೊಂದಿಕೊಂಡವು ಎಂಬ ನಂಬಿಕೆಯೂ ಇದೆ. ಇವೆಲ್ಲವೂ ಸ್ಥಳೀಯ ಜನಪದ ನಂಬಿಕೆಯ ಭಾಗವಾಗಿದ್ದು, ವೈಜ್ಞಾನಿಕ ಹವಾಮಾನ ಮುನ್ಸೂಚನೆಯ ಪರ್ಯಾಯವಲ್ಲ ಎಂಬುದನ್ನು ಗಮನಿಸಬೇಕು.

**ಜಾತ್ರೆಯ ಮೂರು ದಿನ**


ಸೆ. 19ರಂದು ರಾತ್ರಿ ಮಾರುತೇಶ್ವರನ ಪಲ್ಲಕ್ಕಿ ಹಾಗೂ ಭಕ್ತರು ಬರಿಗಾಲಿನಲ್ಲಿ ಪಶ್ಚಿಮದ ಬಸವೇಶ್ವರನಿಗೆ ಪೂಜೆ ಸಲ್ಲಿಸಿ ಕಿರಸೂರಿಗೆ ತೆರಳುವರು. ಅಲ್ಲಿನ ಹನುಮಂತ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಮಲಪ್ರಭಾ ನದಿಯತ್ತ ತೆರಳಿ ಸ್ನಾನ, ಪೂಜೆ ನೆರವೇರಿಸಲಾಗುತ್ತದೆ. ನಂತರ ಹಡಗಲಿ ಗ್ರಾಮದಲ್ಲಿ ಹನುಮಂತ ದೇವರ ಸನ್ನಿಧಿಯಲ್ಲಿ ಮುಂಜಾನೆ ಹೇಳಿಕೆ ನಡೆಯಲಿದೆ.

ಸೆ. 20ರಂದು ಮಾರುತೇಶ್ವರ ಹಾಗೂ ಬಸವೇಶ್ವರರಿಗೆ ರುದ್ರಾಭಿಷೇಕ, ಕಳಸ ಮೆರವಣಿಗೆ ಮತ್ತು ಕಳಸಾರೋಹಣ ನಡೆಯಲಿದೆ. ಹೊಳೆಯಿಂದ ತಂದ ನೀರಿನಿಂದ ದೇವರಿಗೆ ಅಭಿಷೇಕ ನೆರವೇರಿಸಲಾಗುತ್ತದೆ. ಮಧ್ಯಾಹ್ನ ಹತಾರ ಸೇವೆ ಹಾಗೂ ಸಂಜೆ ಮತ್ತೆ ಹತಾರ ಸೇವೆಯೊಂದಿಗೆ ಸುತಗಾಯಿ ಒಡೆಯುವ ಕಾರ್ಯಕ್ರಮ ನಡೆಯಲಿದೆ. ಬಳಿಕ ಭರಮದೇವರ ಕಟ್ಟೆಯ ಮೇಲೆ ನಿಂತು ಮಳೆ–ಬೆಳೆ ಕುರಿತು ಹೇಳಿಕೆ ನಡೆಯಲಿದೆ. ರಾತ್ರಿ ಸಂಗೀತ ಕಾರ್ಯಕ್ರಮವೂ ಆಯೋಜಿಸಲಾಗಿದೆ.

ಸೆ. 21ರಂದು ಬಸವೇಶ್ವರನಿಗೆ ರುದ್ರಾಭಿಷೇಕ ಹಾಗೂ ಬಸವ ಪಟ ಏರಿಸುವ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ ಭಾವಚಿತ್ರ ಮೆರವಣಿಗೆ ಮತ್ತು ಹುಚ್ಚಯ್ಯ ಎಳೆಯುವ ಕಾರ್ಯಕ್ರಮದ ಬಳಿಕ ಸಂಜೆ ಸಕಲ ವಾದ್ಯಮೇಳಗಳೊಂದಿಗೆ ಮಹಾ ರಥೋತ್ಸವ ಜರುಗಲಿದೆ.

ಈ ಪರಂಪರೆ ಮುಂದಿನ ತಲೆಮಾರುಗಳಿಗೂ ತಲುಪಲಿ; ಭಕ್ತಿ ಉಳಿಯಲಿ, ಸಂಸ್ಕೃತಿ ಬೆಳೆಯಲಿ, ಸುರಕ್ಷತೆಯೊಂದಿಗೆ ಜಾತ್ರೆಯ ಸಂಭ್ರಮ ಇನ್ನಷ್ಟು ವಿಸ್ತರಿಸಲಿ ಎಂಬುದು ಭಕ್ತರ ಆಶಯ.

–ಡಾ. ಗುರುರಾಜ ಪೋಶೆಟ್ಟಿಹಳ್ಳಿ
ಸಂಸ್ಕೃತಿ ಚಿಂತಕರು.





## ಜಾತ್ರೆ ಎಂದರೆ ಜನಜೀವನದ ಕನ್ನಡಿಯೂ ಹೌದು

ಗ್ರಾಮೀಣ ಭಾರತದಲ್ಲಿ ಜಾತ್ರೆ ಎಂದರೆ ಕೇವಲ ಧಾರ್ಮಿಕ ಆಚರಣೆ ಅಲ್ಲ. ಅದು ಸಂಬಂಧಗಳ ಪುನರ್ಮಿಲನ. ದೂರವಾದ ಬಂಧುಗಳು ಒಂದೆಡೆ ಸೇರುವ ಸಂದರ್ಭ. ದುಡಿಮೆಯ ಬದುಕಿನ ನಡುವೆ ಒಂದಿಷ್ಟು ಸಂಭ್ರಮ ಕಂಡುಕೊಳ್ಳುವ ಅವಕಾಶ. ಜಾನಪದ ಕಲೆ, ಆಹಾರ, ವ್ಯಾಪಾರ, ಮನರಂಜನೆ, ಭಕ್ತಿ ಮತ್ತು ಸಾಮಾಜಿಕ ಬಾಂಧವ್ಯ–ಎಲ್ಲವೂ ಒಂದೇ ಕಡೆ ಸೇರುವ ಜನಪದ ವಿಶ್ವವಿದ್ಯಾಲಯ.

ತಿಮ್ಮಾಪೂರದ ಜಾತ್ರೆಯಲ್ಲೂ ಇದೇ ಜೀವಂತಿಕೆ ಕಾಣಿಸುತ್ತದೆ. ವಿವಿಧ ಸಮುದಾಯಗಳ ಜನರು ತಮ್ಮದೇ ಆದ ಸೇವೆ, ಆಚರಣೆ ಮತ್ತು ಹೊಣೆಗಾರಿಕೆಗಳೊಂದಿಗೆ ಪಾಲ್ಗೊಳ್ಳುವುದು ಸಾಮರಸ್ಯದ ಚಿತ್ರಣ ನೀಡುತ್ತದೆ.

ವರ್ಷಪೂರ್ತಿ ಕೃಷಿ ಮತ್ತು ಬದುಕಿನ ಜಂಜಾಟದಲ್ಲಿ ತೊಡಗಿರುವ ಜನರಿಗೆ ಜಾತ್ರೆ ಮನಸ್ಸಿನ ಹಬ್ಬ. ದೇವರ ಮುಂದೆ ಹರಕೆ ಸಲ್ಲಿಸುವ ಭಕ್ತರಿಂದ ಹಿಡಿದು ರಥೋತ್ಸವದ ಹಗ್ಗ ಹಿಡಿಯುವ ಯುವಕನ ತನಕ ಎಲ್ಲರೂ ಈ ಸಮೂಹ ಸಂಭ್ರಮದ ಭಾಗವಾಗುತ್ತಾರೆ.

ಪರಂಪರೆ ಉಳಿಯಲಿ; ಸುರಕ್ಷತೆಯೂ ಇರಲಿ

ಆಧುನಿಕತೆಯ ವೇಗದಲ್ಲಿ ಅನೇಕ ಗ್ರಾಮೀಣ ಆಚರಣೆಗಳು ಮರೆಯಾಗುತ್ತಿರುವ ಸಂದರ್ಭದಲ್ಲಿ ತಿಮ್ಮಾಪೂರದ ಜಾತ್ರೆ ತನ್ನ ವಿಶಿಷ್ಟ ಪರಂಪರೆಯನ್ನು ಉಳಿಸಿಕೊಂಡಿರುವುದು ಗಮನಾರ್ಹ. ಆದರೆ ಪರಂಪರೆ ಉಳಿಸುವುದೆಂದರೆ ಅದರ ಅರ್ಥವನ್ನು ಮುಂದಿನ ಪೀಳಿಗೆಗೆ ತಿಳಿಸುವುದೂ ಹೌದು.

ಹತಾರ ಸೇವೆಯಂತಹ ಆಚರಣೆಗಳ ಹಿಂದಿರುವ ನಂಬಿಕೆ, ಸಾಮಾಜಿಕ ಹಿನ್ನೆಲೆ ಮತ್ತು ಜಾನಪದ ಅರ್ಥವನ್ನು ದಾಖಲಿಸಬೇಕು.



ಹಳೆಯ ಹೇಳಿಕೆಗಳನ್ನು ಸಂಗ್ರಹಿಸಿ ಅವುಗಳ ಭಾಷೆ, ಸಂಕೇತ ಮತ್ತು ಕೃಷಿ ಸಂಸ್ಕೃತಿಯ ಸಂಬಂಧವನ್ನು ಅಧ್ಯಯನ ಮಾಡಬೇಕು. ದೇವಾಲಯದ ಐತಿಹ್ಯಗಳನ್ನು ಹಿರಿಯರಿಂದ ದಾಖಲಿಸಿ ಸಂರಕ್ಷಿಸುವ ಕೆಲಸವೂ ಅಗತ್ಯ.

ತಿಮ್ಮಾಪೂರದ ಮಾರುತೇಶ್ವರ–ಬಸವೇಶ್ವರ ಜಾತ್ರೆ ಹೀಗಾಗಿ ಕೇವಲ ಒಂದು ಊರಿನ ಜಾತ್ರೆಯಲ್ಲ; ಅದು ಉತ್ತರ ಕರ್ನಾಟಕದ ಗ್ರಾಮೀಣ ನಂಬಿಕೆ, ಕೃಷಿ ಸಂಸ್ಕೃತಿ, ಜಾನಪದ ಸ್ಮೃತಿ ಮತ್ತು ಸಾಮಾಜಿಕ ಸಾಮರಸ್ಯದ ಜೀವಂತ ದಾಖಲೆ. ಹತಾರ ಸೇವೆಯ ರೋಮಾಂಚನ, ಸುತಗಾಯಿಯ ಸದ್ದು, ಪಲ್ಲಕ್ಕಿಯ ಭಕ್ತಿ, ಹೇಳಿಕೆಯ ಕುತೂಹಲ ಮತ್ತು ರಥೋತ್ಸವದ ಸಂಭ್ರಮ–ಇವೆಲ್ಲವೂ ಸೇರಿ ತಿಮ್ಮಾಪೂರದ ಜಾತ್ರೆಗೆ ತನ್ನದೇ ಆದ ವಿಶಿಷ್ಟ ಗುರುತನ್ನು ನೀಡಿವೆ.

## ದಾಖಲೆ ಇಲ್ಲದ ಗ್ರಾಮಠಾಣಾ ಆಸ್ತಿಗಳಿಗೂ ನ.1ರಿಂದ ಇ-ಸ್ವತ್ತು: ಖಂಡ್ರೆ

● ವಿಕ್ರಮ ವಾಹಿನಿ । ಬೆಂಗಳೂರು

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳಿಗೆ ಇ-ಸ್ವತ್ತು ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸಲು 'ಇ-ಸ್ವತ್ತು–03' ತಂತ್ರಾಂಶ ಸಿದ್ಧಪಡಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ದಾಖಲೆಗಳಿಲ್ಲದ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಅರ್ಹ ಆಸ್ತಿಗಳಿಗೂ ನಿಯಮಾನುಸಾರ ಇ-ಸ್ವತ್ತು ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಅಕ್ಟೋಬರ್ 20ರಿಂದ ಅರ್ಜಿ ಸ್ವೀಕಾರ ಮತ್ತು ಸ್ಥಳ ಪರಿಶೀಲನೆ ಆರಂಭಿಸಿ, ನವೆಂಬರ್ 1ರಿಂದ ಇ-ಸ್ವತ್ತು ವಿತರಿಸುವ ಅಭಿಯಾನ ನಡೆಸಲು ಸೂಚಿಸಲಾಗಿದೆ.

ನ್ಯಾಯಾಲಯದ ವ್ಯಾಜ್ಯದಲ್ಲಿರುವ, ಸರ್ಕಾರಿ ಜಾಗ, ಕೆರೆ ಅಂಗಳ, ಬಿ-ಖರಾಬು ಹಾಗೂ ಅರಣ್ಯ ಪ್ರದೇಶ ಒತ್ತುವರಿ ಮಾಡಿಕೊಂಡು ನಿರ್ಮಿಸಿರುವ ಆಸ್ತಿಗಳನ್ನು ಹೊರತುಪಡಿಸಿ, ಅರ್ಹ ವಾರಸುದಾರರಿಗೆ ಇ-ಸ್ವತ್ತು ನೀಡಲಾಗುವುದು. ಗ್ರಾಮಠಾಣಾ ವ್ಯಾಪ್ತಿಯಲ್ಲಿ 4,000 ಚದರ ಅಡಿ ಒಳಗಿನ ಆಸ್ತಿಗಳಿಗೆ ಈ ಸೌಲಭ್ಯ ಅನ್ವಯವಾಗಲಿದೆ.

ಅರ್ಜಿ ಸಲ್ಲಿಸುವವರು ವಿದ್ಯುತ್ ಬಿಲ್, ಮನೆಗಂದಾಯ ಅಥವಾ ತೆರಿಗೆ ಪಾವತಿ ರಸೀದಿ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ನಿವಾಸ ಪ್ರಮಾಣಪತ್ರ ಸೇರಿದಂತೆ ಲಭ್ಯವಿರುವ ದಾಖಲೆಗಳನ್ನು ಸಲ್ಲಿಸಬೇಕು. ತಮ್ಮ ನೀಡಿರುವ ಮಾಹಿತಿ ತಪ್ಪಾಗಿದ್ದರೆ ಇ-ಸ್ವತ್ತು ರದ್ದುಪಡಿಸಬಹುದು ಎಂಬ ಮುಚ್ಚಳಿಕೆಯೊಂದಿಗೆ ಅಫಿಡವಿಟ್ ಸಲ್ಲಿಸುವ ಅವಕಾಶವೂ ಇರಲಿದೆ.

ಅರ್ಹತೆಯನ್ನು ಖಚಿತಪಡಿಸಲು ಸಂಬಂಧಿಸಿದ ಗ್ರಾಮಗಳಲ್ಲಿ ಗ್ರಾಮಸಭೆ ನಡೆಸಿ, ಅರ್ಜಿದಾರರು ಅದೇ ಆಸ್ತಿಯಲ್ಲಿ ವಾಸಿಸುತ್ತಿದ್ದಾರೆಯೇ ಹಾಗೂ ಅವರೇ ನೈಜ ಮಾಲೀಕರೇ ಎಂಬುದನ್ನು ಪರಿಶೀಲಿಸಲಾಗುತ್ತದೆ. ಸಾರ್ವಜನಿಕ ಆಕ್ಷೇಪಣೆಗಾಗಿ 21 ದಿನಗಳ ಕಾಲಾವಕಾಶ ನೀಡಲಾಗುವುದು. ಯಾವುದೇ ಆಕ್ಷೇಪಣೆ ಇಲ್ಲದಿದ್ದರೆ ನಿಯಮಾನುಸಾರ ಇ-ಸ್ವತ್ತು ನೀಡಲು ಕ್ರಮ ಕೈಗೊಳ್ಳಲಾಗುತ್ತದೆ.

ತಾಂತ್ರಿಕ ಕಾರಣಗಳಿಂದ ಇ-ಸ್ವತ್ತು ವಿತರಣೆಯಲ್ಲಿ ಉಂಟಾಗುತ್ತಿರುವ ವಿಳಂಬ ಹಾಗೂ ದಾಖಲೆಗಳ ಕೊರತೆಯಿಂದ ಎದುರಾಗಿರುವ ಸಮಸ್ಯೆಗಳ ಪರಿಹಾರಕ್ಕಾಗಿ ರಚಿಸಿದ್ದ ಐದು ಸದಸ್ಯರ ಸಮಿತಿಯ ವರದಿ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ. ರಾಜ್ಯೋತ್ಸವ ಮಾಸದಲ್ಲಿ ಕನಿಷ್ಠ 10 ಲಕ್ಷ ಆಸ್ತಿಗಳಿಗೆ ಇ-ಸ್ವತ್ತು ತಲುಪಿಸುವ ಗುರಿ ಹೊಂದಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

## ಡಿಸೆಂಬರ್ ಒಳಗೆ ಪಂಚಾಯಿತಿ ಚುನಾವಣೆ

● ವಿಕ್ರಮ ವಾಹಿನಿ । ಬೆಂಗಳೂರು

ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಡಿಸೆಂಬರ್ ಒಳಗೆ ಚುನಾವಣೆ ನಡೆಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ. ಇವಿಎಂ ಬದಲಿಗೆ ಮತಪೆಟ್ಟಿಗೆ ಬಳಸಿ ಚುನಾವಣೆ ನಡೆಸಲು ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ತಿಳಿಸಿದ್ದಾರೆ.


ಚುನಾವಣೆಗೆ ಮತಪೆಟ್ಟಿಗೆಗಳ ಖರೀದಿ ಹಾಗೂ ನೇರ ವೆಬ್‌ಕ್ಯಾಸ್ಟಿಂಗ್‌ಗಾಗಿ 151.31 ಕೋಟಿ ವೆಚ್ಚಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಅವಧಿ ಪೂರ್ಣಗೊಂಡಿರುವ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಿದ್ಧತೆಗಳು ಆರಂಭವಾಗಿವೆ.

### ಸರ್ವಜ್ಞನಗರದ ಯುವಶಕ್ತಿ, ತಳಮಟ್ಟದ

## ಪರಿವರ್ತನೆ ಅನಾವರಣ

● ವಿಕ್ರಮ ವಾಹಿನಿ । ಬೆಂಗಳೂರು

ಸರ್ವಜ್ಞನಗರ ಕ್ಷೇತ್ರದ ಯುವಜನರ ಉತ್ಸಾಹ, ಕನಸುಗಳು, ಸಾಧನೆಗಳು ಹಾಗೂ ಭವಿಷ್ಯದ ಆಶಯಗಳನ್ನು ದಾಖಲಿಸಿರುವ ಕಿರು ಸಾಕ್ಷ್ಯಚಿತ್ರವೊಂದು ಯುಟ್ಯೂಬ್‌ನಲ್ಲಿ ಬಿಡುಗಡೆಯಾಗಿದೆ.



ಆಜೆಲಿಯಾ ಪ್ರೊಡಕ್ಷನ್ಸ್ ನಿರ್ಮಿಸಿರುವ ಈ ಸಾಕ್ಷ್ಯಚಿತ್ರವನ್ನು ಚಲನಚಿತ್ರ ನಿರ್ದೇಶಕಿ ರೆನಿಟಾ ಜಾರ್ಜ್ ನಿರ್ದೇಶಿಸಿದ್ದಾರೆ. ಕ್ಷೇತ್ರದ ವಿವಿಧ ಭಾಗಗಳ ಯುವಜನರ ಬದುಕಿನ ಪಯಣವನ್ನು ಚಿತ್ರ ಒಳಗೊಂಡಿದ್ದು, ಶಿಕ್ಷಣ, ಸಬಲೀಕರಣ, ಆರೋಗ್ಯ, ಅವಕಾಶಗಳು ಹಾಗೂ ನಾಯಕತ್ವದ ಮೂಲಕ ಬದುಕು ರೂಪಿಸಿಕೊಳ್ಳುತ್ತಿರುವ ಯುವಕರ ಅನುಭವಗಳನ್ನು ಕಟ್ಟಿಕೊಡಲಾಗಿದೆ.

ವೈಯಕ್ತಿಕ ಸಾಧನೆಗಳ ಜತೆಗೆ, ತಮ್ಮ ಸಾಮರ್ಥ್ಯ ಮತ್ತು ಧ್ವನಿಯನ್ನು ಕಂಡುಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿರುವ ಹೊಸ ತಲೆಮಾರಿನ ಚಿತ್ರಣವೂ ಸಾಕ್ಷ್ಯಚಿತ್ರದಲ್ಲಿದೆ. ಸರ್ವಜ್ಞನಗರದಲ್ಲಿ ವರ್ಷಗಳಿಂದ ನಡೆಯುತ್ತಿರುವ ತಳಮಟ್ಟದ ಅಭಿವೃದ್ಧಿ ಕಾರ್ಯಗಳು ಜನರ ಬದುಕಿನಲ್ಲಿ ತಂದಿರುವ ಬದಲಾವಣೆಗಳನ್ನೂ ಚಿತ್ರ ದಾಖಲಿಸಿದೆ. ಸಾಕ್ಷ್ಯಚಿತ್ರದ ಕುರಿತು ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಹಾಗೂ ಸರ್ವಜ್ಞನಗರ ಶಾಸಕ ಕೆ.ಜೆ. ಜಾರ್ಜ್ ಮಾತನಾಡಿ, ಶಾಲೆಗಳು, ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಕಾರ್ಯಕ್ರಮಗಳ ಮೂಲಕ ವರ್ಷಗಳಿಂದ ನಡೆದ ನಿರಂತರ ಪ್ರಯತ್ನಗಳ ಫಲವಾಗಿ ಬದಲಾವಣೆ ಸಾಧ್ಯವಾಗಿದೆ. ಯುವಜನರಿಗೆ ಅವಕಾಶಗಳನ್ನು ಸೃಷ್ಟಿಸಿ, ಅವರ ಸಾಮರ್ಥ್ಯವನ್ನು ಬೆಳೆಸಿದಾಗ ಸಮುದಾಯದಲ್ಲಿ ಅರ್ಥಪೂರ್ಣ ಬದಲಾವಣೆ ತರಲು ಸಾಧ್ಯ ಎಂಬ ಸಂದೇಶವನ್ನು ಸಾಕ್ಷ್ಯಚಿತ್ರ ಸಾರುತ್ತದೆ.

## ಪಾಕಿಸ್ತಾನದಲ್ಲಿ ರಾತ್ರಿ 9ಕ್ಕೆ ಅಂಗಡಿ ಬಂದ್; ಮದುವೆಯಲ್ಲಿ ಒಂದೇ ಖಾದ್ಯ?

● ವಿಕ್ರಮ ವಾಹಿನಿ । ಇಸ್ಲಾಮಾಬಾದ್

ಇಂಧನ ಪೂರೈಕೆಯ ಮೇಲಿನ ಒತ್ತಡ ಹಾಗೂ ವೆಚ್ಚ ಕಡಿತದ ಹಿನ್ನೆಲೆಯಲ್ಲಿ ಪಾಕಿಸ್ತಾನ ಸರ್ಕಾರ ದೇಶಾದ್ಯಂತ ಹಲವು ಮಿತವ್ಯಯ ಮತ್ತು ಇಂಧನ ಸಂರಕ್ಷಣಾ ಕ್ರಮಗಳನ್ನು ಜಾರಿಗೆ ತಂದಿದೆ. ಕೋವಿಡ್ ಕಾಲದ ನಿರ್ಬಂಧಗಳನ್ನು ನೆನಪಿಸುವಂತಿರುವ ಈ ನಿಯಮಗಳಡಿ ಸರ್ಕಾರಿ ವಾಹನ ಖರೀದಿಗೆ ನಿರ್ಬಂಧ, ಸರ್ಕಾರಿ ವಾಹನಗಳ ಇಂಧನ ಹಂಚಿಕೆಯಲ್ಲಿ ಶೇ.50ರಷ್ಟು ಕಡಿತ ಹಾಗೂ ರಾತ್ರಿ ವ್ಯಾಪಾರ ವಹಿವಾಟಿಗೆ ಸಮಯ ಮಿತಿ ವಿಧಿಸಲಾಗಿದೆ.

ಅಂಗಡಿಗಳು, ಮಾರುಕಟ್ಟೆಗಳು ಹಾಗೂ ಶಾಪಿಂಗ್ ಮಾಲ್‌ಗಳು ರಾತ್ರಿ 9ಕ್ಕೆ ಮುಚ್ಚಬೇಕು. ಮದುವೆ ಹಾಲ್‌ಗಳು ರಾತ್ರಿ 10ರೊಳಗೆ ಹಾಗೂ ರೆಸ್ಟೋರೆಂಟ್, ಕೆಫೆಗಳು ರಾತ್ರಿ 11ರೊಳಗೆ ಮುಚ್ಚುವಂತೆ ಸೂಚಿಸಲಾಗಿದೆ. ಮದುವೆ ಹಾಗೂ ಇತರ ಸಮಾರಂಭಗಳಲ್ಲಿ ಒಂದೇ ಖಾದ್ಯ ಬಡಿಸಲು ಅವಕಾಶ ನೀಡಲಾಗಿದೆ.

ಸರ್ಕಾರಿ ಅಧಿಕಾರಿಗಳ ವಿದೇಶ ಪ್ರವಾಸಕ್ಕೂ ಮೂರು ತಿಂಗಳ ನಿರ್ಬಂಧ ಹೇರಲಾಗಿದ್ದು, ಅನಿವಾರ್ಯ ಪ್ರವಾಸಕ್ಕೆ ಎಕಾನಮಿ ಕ್ಲಾಸ್‌ನಲ್ಲಿ ಪ್ರಯಾಣಿಸುವಂತೆ ಸೂಚಿಸಲಾಗಿದೆ. ಸರ್ಕಾರಿ ಔತಣಕೂಟಗಳು, ಅನಗತ್ಯ ಸೆಮಿನಾರ್ ಹಾಗೂ ಸಮ್ಮೇಳನಗಳಿಗೂ ಕಡಿವಾಣ ಹಾಕಲಾಗಿದೆ.

ಆದರೆ ಆಸ್ಪತ್ರೆ, ಔಷಧ ಅಂಗಡಿ, ಪೆಟ್ರೋಲ್ ಮತ್ತು ಸಿಎನ್‌ಜಿ ಕೇಂದ್ರ, ಬೇಕರಿ, ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಕೇಂದ್ರ, ಜಿಮ್, ಕ್ರೀಡಾ ಸೌಲಭ್ಯ, ಐಟಿ ಕಂಪನಿ ಹಾಗೂ ಕಾಲ್ ಸೆಂಟರ್‌ಗಳಿಗೆ ಸಮಯದ ನಿರ್ಬಂಧದಿಂದ ವಿನಾಯಿತಿ ನೀಡಲಾಗಿದೆ.

PRGI NO: KARKAN/2018/78481

## ‘ಎಎಸ್‌ಡಿಡಿಒ ಮತದಾರರ ವಿವರ ಮರುಪರಿಶೀಲಿಸಿ’

● ವಿಕ್ರಮ ವಾಹಿನಿ | ಬೆಂಗಳೂರು

ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ ಎಎಸ್‌ಡಿಡಿಒ ಎಂದು ವರ್ಗೀಕರಿಸಿ ಹೊರಗಿಡಲಾಗಿರುವ ಮತದಾರರ ವಿವರಗಳನ್ನು ಮರುಪರಿಶೀಲಿಸಬೇಕು ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಮನವಿ ಮಾಡಿದ್ದಾರೆ.



ಯಶವಂತಪುರ ವಿಧಾನಸಭಾ ಕ್ಷೇತ್ರದ 512ನೇ ಮತಗಟ್ಟೆಯಲ್ಲಿ ಈ ಹಿಂದೆ 1,016 ಮತದಾರರಿದ್ದು, ಅವರ ಪೈಕಿ ಶೇ.62ರಷ್ಟು ಮಂದಿಯನ್ನು ಎಎಸ್‌ಡಿಡಿಒ ಹಾಗೂ ವಿವರ ವ್ಯತ್ಯಾಸದ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಕೇವಲ ಶೇ.38ರಷ್ಟು ಮತದಾರರನ್ನು ಮಾತ್ರ ಅರ್ಹರೆಂದು ಪರಿಗಣಿಸಿರುವುದು ಕಳವಳಕಾರಿ ಎಂದು ಅವರು ತಿಳಿಸಿದ್ದಾರೆ.

ರಾಜ್ಯದ ಹಲವು ಮತಗಟ್ಟೆಗಳಲ್ಲೂ ಇಂತಹ ಸಮಸ್ಯೆಗಳು ಕಂಡುಬರುತ್ತಿವೆ. ಸ್ವಂತ ಮನೆಯಲ್ಲಿ ವಾಸಿಸುತ್ತಿರುವವರನ್ನು ‘ಪತ್ತೆಯಾಗದವರು’ ಅಥವಾ ‘ಶಾಶ್ವತವಾಗಿ ಸ್ಥಳಾಂತರಗೊಂಡವರು’ ಎಂದು ಹಾಗೂ ಜೀವಂತವಾಗಿರುವವರನ್ನು ‘ಮೃತರು’ ಎಂದು ವರ್ಗೀಕರಿಸಿರುವ ದೂರುಗಳಿವೆ. 2002ರ ಮ್ಯಾಪಿಂಗ್ ವಿವರ ಹೊಂದಿರುವವರಿಗೂ ‘ಮ್ಯಾಪಿಂಗ್ ಆಗಿಲ್ಲ’ ಎಂದು ನೋಟಿಸ್ ನೀಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಸ್ಥಳಾಂತರಗೊಂಡವರು ಹಾಗೂ ಮೃತರೆಂದು ಗುರುತಿಸಲಾಗಿರುವ ಮತದಾರರ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಬೇಕು. ಮ್ಯಾಪಿಂಗ್ ಆಗಿಲ್ಲ ಎಂದು ನೋಟಿಸ್ ನೀಡಲಾಗಿರುವ ಮತದಾರರನ್ನೂ ಮರುಪರಿಶೀಲಿಸಬೇಕು. ಯಾವುದೇ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಕ್ರಮವಹಿಸುವ ಜತೆಗೆ, ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಬೇಕು ಎಂದು ರಮೇಶ್ ಬಾಬು ಮನವಿ ಮಾಡಿದ್ದಾರೆ.

ಮತಗಟ್ಟೆ ಸಂಖ್ಯೆ ಬದಲಾವಣೆ: ಯಶವಂತಪುರ ಕ್ಷೇತ್ರದ ಒ.ಬಿ.ಚೂಡಹಳ್ಳಿಯ ಹಿಂದಿನ 512ನೇ ಮತಗಟ್ಟೆ, ಕರಡು ಮತದಾರರ ಪಟ್ಟಿ ಪ್ರಕಟಿಸುವ ವೇಳೆಗೆ 521ನೇ ಮತಗಟ್ಟೆಯಾಗಿದೆ. ರಾಜ್ಯದಾದ್ಯಂತ 1,600ಕ್ಕೂ ಹೆಚ್ಚು ಹೊಸ ಮತಗಟ್ಟೆಗಳನ್ನು ಸೃಷ್ಟಿಸಿರುವುದರಿಂದ ಹಿಂದಿನ ಮತಗಟ್ಟೆಗಳ ಸಂಖ್ಯೆಯಲ್ಲೂ ಬದಲಾವಣೆಗಳಾಗಿವೆ.

## ದಸರಾ ಗಜಪಡೆಗಳ ತೂಕ ಪರಿಶೀಲನೆ; 5.85 ಟನ್‌ನ ಸುಗ್ರೀವ ಅಗ್ರಸ್ಥಾನ

● ವಿಕ್ರಮ ವಾಹಿನಿ | ಮೈಸೂರು

ಮೈಸೂರು ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ 12 ಗಜಪಡೆಗಳ ತೂಕ ಪರಿಶೀಲನೆ ಪೂರ್ಣಗೊಂಡಿದ್ದು, 44 ವರ್ಷದ ಸುಗ್ರೀವ 5,850 ಕೆ.ಜಿ. ತೂಕದೊಂದಿಗೆ ಅತಿ ಭಾರದ ಆನೆಯಾಗಿ ಗುರುತಿಸಿಕೊಂಡಿದ್ದಾನೆ.

ಗಜಪಡೆಯಲ್ಲಿನ ಅತ್ಯಂತ ಹಿರಿಯ ಆನೆ 57 ವರ್ಷದ ಶ್ರೀಕಂಠ (5,790 ಕೆ.ಜಿ.) ಆಗಿದ್ದು, ಏಕಲವ್ಯ (5,600 ಕೆ.ಜಿ.), ಧನಂಜಯ (5,530 ಕೆ.ಜಿ.) ಮತ್ತು ಮಹೇಂದ್ರ (5,490 ಕೆ.ಜಿ.) ನಂತರದ ಸ್ಥಾನದಲ್ಲಿವೆ. ಉಳಿದಂತೆ ಪ್ರಶಾಂತ 5,205, ಗೋಪಿ 5,170, ಶ್ರೀರಾಮ 4,820, ಲಕ್ಷ್ಮಿ 3,990, ಚೈತ್ರಾ 3,295, ರೂಪಾ 3,260 ಹಾಗೂ ಕಾವೇರಿ 3,075 ಕೆ.ಜಿ. ತೂಕ ಹೊಂದಿವೆ.

ಚಿನ್ನದ ಅಂಬಾರಿ ಹೊರುವ ಕ್ಯಾಪ್ಟನ್ ಆಯ್ಕೆ ಇನ್ನೂ ಅಂತಿಮವಾಗಿಲ್ಲ. ಮಹೇಂದ್ರ, ಧನಂಜಯ ಮತ್ತು ಪ್ರಶಾಂತ ನಡುವೆ ಪೈಪೋಟಿಯಿದ್ದು, ತಾಲೀಮುಗಳ ಬಳಿಕ ಸದೃಢ ಪ್ರದರ್ಶನ ನೀಡುವ ಆನೆಯನ್ನು ಕ್ಯಾಪ್ಟನ್ ಆಗಿ ಆಯ್ಕೆ ಮಾಡಲಾಗುವುದು ಎಂದು ಡಿಸಿಎಫ್ ಡಾ. ಪ್ರಭುಗೌಡ ತಿಳಿಸಿದ್ದಾರೆ.

ಆನೆಗಳ ಆರೋಗ್ಯದ ಆಧಾರದ ಮೇಲೆ ವಿಶೇಷ ಆಹಾರ ನೀಡಲು ತೂಕ ಪರಿಶೀಲನೆ ನೆರವಾಗಲಿದೆ. ಜಂಬೂಸವಾರಿ ಮಾರ್ಗದಲ್ಲಿ ಬೆಳಗ್ಗೆ ಮತ್ತು ಸಂಜೆ ತಾಲೀಮು ನಡೆಯಲಿದ್ದು, ಗಜಪಡೆಗಳೊಂದಿಗೆ ಸೆಲ್ಫಿ, ರೀಲ್ಸ್ ಮಾಡುವುದನ್ನು ಹಾಗೂ ಸುಳ್ಳು ವಿಡಿಯೋ ಹರಡುವುದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಇಲಾಖೆ ತಿಳಿಸಿದೆ.



ಶುಕ್ರವಾರ ನವದೆಹಲಿಯಲ್ಲಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಿಂದ ‘ಸನಾತನ ಧರ್ಮ ಪ್ರವರ್ತನಾಚಾರ್ಯ’ ಉಪಾಧಿಯೊಂದಿಗೆ ಗೌರವಿಸಲ್ಪಟ್ಟ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಗುರುವಂದನೆ ಸ್ವೀಕರಿಸಿ ಅನುಗ್ರಹ ಸಂದೇಶ ನೀಡಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾದ ಜಗದ್ಗುರು ಶ್ರೀ ಮಧ್ವಾಚಾರ್ಯರ ‘ಬ್ರಹ್ಮಸೂತ್ರ ಭಾಷ್ಯ’ದ ಹಿಂದಿ ಆವೃತ್ತಿಯನ್ನು ಲೋಕಾರ್ಪಣೆಗೊಳಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ವರಖೇಡಿ ಶ್ರೀನಿವಾಸ ಆಚಾರ್ಯ ವಹಿಸಿದ್ದರು. ಲಾಲ್ ಬಹಾದ್ದೂರ್ ಶಾಸ್ತ್ರಿ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮುರಳೀಮನೋಹರ ಪಾಠಕ್ ಮುಖ್ಯ ಅತಿಥಿಯಾಗಿದ್ದರು. ವಿದ್ವಾಂಸರಾದ ಸುಕಾಂತ ಕುಮಾರ ಸೇನಾಪತಿ, ಡಾ. ಪೂರಣ್ ಮಲಗುಪ್ತ, ಶ್ರೀಧರ ಮಿಶ್ರಾ, ಲಲಿತಕುಮಾರ ತ್ರಿಪಾಠಿ, ಸಂಜೀವ ಗೋಯಲ್, ಲೀನ್ ಸಕ್ಕರ್‌ವಾಲ್, ರಾ.ಗಾ. ಮುರಳೀಕೃಷ್ಣ, ಡಾ. ವಿಠೋಬಾಚಾರ್ಯ ಹಾಗೂ ಪವನಕುಮಾರ ಉಪಸ್ಥಿತರಿದ್ದರು. ಡಾ. ಮಧುಕೇಶ್ವರ ಭಟ್ಟರು ಮಾನಪತ್ರ ವಾಚಿಸಿದರು. ಡಾ. ಗಣೇಶ ಪಂಡಿತ್ ಕಾರ್ಯಕ್ರಮ ನಿರೂಪಿಸಿದರು.

## ಕೂನೋದಲ್ಲಿ 4 ಚಿರತೆ ಮರಿಗಳ ಜನನ

● ವಿಕ್ರಮ ವಾಹಿನಿ | ಭೋಪಾಲ್

ಮಧ್ಯಪ್ರದೇಶದ ಶಿಯೋಪುರ್ ಜಿಲ್ಲೆಯ ಕೂನೋ ರಾಷ್ಟ್ರೀಯ ಉದ್ಯಾನವನದಲ್ಲಿ ನಾಲ್ಕು ಚಿರತೆ ಮರಿಗಳು ಜನಿಸಿದ್ದು, ಭಾರತದಲ್ಲಿ ಚಿರತೆಗಳ ಪುನರ್‌ಸ್ಥಾಪನಾ ಯೋಜನೆಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ.

ವಿಶೇಷವೆಂದರೆ, ಈ ನಾಲ್ಕು ಮರಿಗಳಿಗೆ ಜನ್ಮ ನೀಡಿರುವ ತಾಯಿ ಚಿರತೆ ವಿದೇಶದಿಂದ ಭಾರತಕ್ಕೆ ತರಲಾಗಿದ್ದ ಚಿರತೆಯಲ್ಲ. ‘ಪ್ರಾಜೆಕ್ಟ್ ಚೀತಾ’ ಅಡಿ ಭಾರತದಲ್ಲೇ ಜನಿಸಿದ ಚಿರತೆಯೊಂದು ಮೊದಲ ಬಾರಿಗೆ ಮರಿಗಳಿಗೆ ಜನ್ಮ ನೀಡಿರುವುದು ಯೋಜನೆಯ ಪ್ರಮುಖ ಸಾಧನೆ ಎಂದು ಪರಿಗಣಿಸಲಾಗಿದೆ.

ವಿದೇಶದಿಂದ ತರಲಾದ ಚಿರತೆಗಳು ಭಾರತದಲ್ಲಿ ಮರಿಗಳಿಗೆ ಜನ್ಮ ನೀಡಿದ್ದವು. ಇದೀಗ ಭಾರತದಲ್ಲೇ ಹುಟ್ಟಿ ಬೆಳೆದ ಚಿರತೆಯು ನಾಲ್ಕು ಮರಿಗಳಿಗೆ ಜನ್ಮ ನೀಡಿರುವುದು ದೇಶದ ಹವಾಮಾನ ಹಾಗೂ ಪರಿಸರಕ್ಕೆ ಚಿರತೆಗಳು ಹೊಂದಿಕೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಹೊಸ ಮರಿಗಳ ಜನನದಿಂದ ಕೂನೋದಲ್ಲಿ ಚಿರತೆಗಳ ಸಂತತಿ ಮತ್ತಷ್ಟು ವೃದ್ಧಿಯಾಗುವ ನಿರೀಕ್ಷೆ ಮೂಡಿದೆ.

ಚಿರತೆಗಳ ಪುನರ್‌ಸ್ಥಾಪನೆ ಹಾಗೂ ಸಂತತಿ ವೃದ್ಧಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಕೈಗೊಂಡಿರುವ ‘ಪ್ರಾಜೆಕ್ಟ್ ಚೀತಾ’ಗೆ ಈ ಬೆಳವಣಿಗೆ ಮತ್ತಷ್ಟು ಉತ್ತೇಜನ ನೀಡಿದೆ.

## ‘ದಸರಾ ಉದ್ಘಾಟನೆಗೆ ನ್ಯಾ. ಬಿ.ವಿ. ನಾಗರತ್ನ ಅವರನ್ನು ಆಹ್ವಾನಿಸಿ’

● ವಿಕ್ರಮ ವಾಹಿನಿ | ಬೆಂಗಳೂರು

ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರನ್ನು ಆಹ್ವಾನಿಸುವಂತೆ ವಿಧಾನ ಪರಿಷತ್ ಸದಸ್ಯ ಹಾಗೂ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, ಕರ್ನಾಟಕದ ಮೂಲದವರಾದ ನ್ಯಾಯಮೂರ್ತಿ ನಾಗರತ್ನ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವುದು ನಾಡಿನ ಮಹಿಳಾ ಸಬಲೀಕರಣಕ್ಕೆ ಮಹತ್ವದ ಸಂದೇಶ ನೀಡಲಿದೆ ಎಂದು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ಅಧಿಕೃತ ಮಾಹಿತಿಯ ಪ್ರಕಾರ, ಅವರು ಬೆಂಗಳೂರಿನಲ್ಲಿ ಜನಿಸಿದ್ದು, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ ಬಳಿಕ 2021ರ ಆಗಸ್ಟ್ 31ರಂದು ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡಿದ್ದಾರೆ.



**“ವಿಶ್ವವಿಖ್ಯಾತ ಮೈಸೂರು ದಸರಾ ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಹಾಗೂ ವೈಭವವನ್ನು ಜಗತ್ತಿಗೆ ಪರಿಚಯಿಸುವ ಐತಿಹಾಸಿಕ ಉತ್ಸವ. ಈ ಬಾರಿಯ ದಸರಾ ಉದ್ಘಾಟನೆಗೆ ಮಂಡ್ಯ ಮಣ್ಣಿನ ಮಗಳಾದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೆಸರನ್ನು ಸರ್ಕಾರ ಪರಿಗಣಿಸಬೇಕು. ಕರ್ನಾಟಕದ ನ್ಯಾಯಾಂಗ ಪರಂಪರೆಯೊಂದಿಗೆ ನಿಕಟ ನಂಟು ಹೊಂದಿರುವ ಅವರು, ನ್ಯಾಯಾಂಗ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಹಾಗೂ ಸಾಧನೆಗಳಿಂದ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದಲೂ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರನ್ನು ದಸರಾ ಉದ್ಘಾಟಕರಾಗಿ ಆಹ್ವಾನಿಸುವುದು ದೇಶದ ಮಹಿಳೆಯರಿಗೆ ಪ್ರೇರಣಾದಾಯಕ ಸಂದೇಶ ನೀಡಲಿದೆ. ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಅವರಿಂದ ದಸರಾ ಉದ್ಘಾಟನೆ ನಡೆದರೆ ನಾಡಹಬ್ಬದ ಗೌರವ ಮತ್ತಷ್ಟು ಹೆಚ್ಚಲಿದೆ.”**

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಇಂಗಲಗುಪ್ಪೆ ಮೂಲದವರಾದ ನಾಗರತ್ನ ಅವರು ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರ ಪುತ್ರಿ ಎಂದು ಪತ್ರದಲ್ಲಿ ಉಲ್ಲೇಖಿಸಿರುವ ದಿನೇಶ್ ಗೂಳಿಗೌಡ, ನ್ಯಾಯಾಂಗ ಕ್ಷೇತ್ರದಲ್ಲಿ ಅವರ ಸೇವೆಯನ್ನು ಗೌರವಿಸುವ ನಿಟ್ಟಿನಲ್ಲಿ ದಸರಾ ಉದ್ಘಾಟನೆಗೆ ಪರಿಗಣಿಸುವಂತೆ ಕೋರಿದ್ದಾರೆ.

ಮೈಸೂರು ದಸರಾ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಪ್ರಮುಖ ಉತ್ಸವವಾಗಿದ್ದು, ನ್ಯಾಯಾಂಗ ಕ್ಷೇತ್ರದ ಪ್ರಮುಖ ಮಹಿಳಾ ವ್ಯಕ್ತಿತ್ವವನ್ನು ಉದ್ಘಾಟಕರನ್ನಾಗಿ ಆಹ್ವಾನಿಸುವುದರಿಂದ ಮಹಿಳಾ ಸಬಲೀಕರಣದ ಸಂದೇಶವನ್ನು ಸಾರಬಹುದಾಗಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

## ಪುನೀತ್ ವಿರುದ್ಧ ಅವಹೇಳನಕಾರಿ ಪೋಸ್ಟ್: ಎಚ್ಚರಿಕೆ ನೀಡಿ ಪ್ರಕರಣ ರದ್ದು



● ವಿಕ್ರಮ ವಾಹಿನಿ | ಬೆಂಗಳೂರು

ದಿವಂಗತ ನಟ ಪುನೀತ್ ರಾಜಕುಮಾರ್ ಅವರ ನಿಧನದ ಬಳಿಕ ಇನ್‌ಸ್ಟಾಗ್ರಾಂನಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದ ಯುವಕನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ. ಆದರೆ, ಸಾಮಾಜಿಕ ಮಾಧ್ಯಮದಲ್ಲಿ ಇಂತಹ ಪೋಸ್ಟ್ ಮಾಡುವಾಗ ಅದರ ಪರಿಣಾಮದ ಅರಿವು ಇರಬೇಕು ಎಂದು ಅರ್ಜಿದಾರನಿಗೆ ಕಟು ಎಚ್ಚರಿಕೆ ನೀಡಿದೆ.

ಬೆಂಗಳೂರಿನ ಸುಬ್ರಹ್ಮಣ್ಯನಗರ ಠಾಣೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 67 ಹಾಗೂ ಐಪಿಸಿ ಸೆಕ್ಷನ್ 153ಎ ಅಡಿ ದಾಖಲಾಗಿದ್ದ ಪ್ರಕರಣ ರದ್ದುಪಡಿಸುವಂತೆ ರಿತ್ವಿಕ್ ಶರ್ಮಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಪುನೀತ್ ರಾಜಕುಮಾರ್ ನಿಧನದ ಸಂದರ್ಭದಲ್ಲಿ ಇಂತಹ ಅವಹೇಳನಕಾರಿ ಪೋಸ್ಟ್ ಮಾಡಿರುವುದು ದುಃಖಕರ. ಸಾಮಾಜಿಕ ಮಾಧ್ಯಮದಲ್ಲಿ ಯಾವುದೇ ವಿಷಯ ಪ್ರಕಟಿಸುವ ಮುನ್ನ ಅದರ ಸಂದರ್ಭ ಮತ್ತು ಪರಿಣಾಮವನ್ನು ಅರಿತುಕೊಳ್ಳಬೇಕು ಎಂದು ನ್ಯಾಯಾಲಯ ಹೇಳಿದೆ.

ಅರ್ಜಿದಾರ ಲಂಡನ್‌ನಲ್ಲಿ ಹುಟ್ಟಿ ಬೆಳೆದಿದ್ದು, ಪೋಸ್ಟ್‌ನ ಪರಿಣಾಮದ ಬಗ್ಗೆ ಅರಿವಿರಲಿಲ್ಲ. ತನ್ನ ಪ್ರಮಾದವನ್ನು ಒಪ್ಪಿಕೊಂಡು ವಿಷಾದ ವ್ಯಕ್ತಪಡಿಸಿದ್ದಾನೆ. ಆತ ಅಶೋಕ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪದವಿ ವ್ಯಾಸಂಗ ಮಾಡುತ್ತಿದ್ದು, ಕ್ರಿಮಿನಲ್ ಪ್ರಕರಣ ಮುಂದುವರಿದರೆ ಆತನ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಪರ ವಕೀಲರು ವಾದಿಸಿದರು. ಅರ್ಜಿದಾರನ ಭವಿಷ್ಯವನ್ನು ಪರಿಗಣಿಸಿದ ಪೀಠ, ಆತನಿಗೆ ಎಚ್ಚರಿಕೆ ನೀಡಿ, ಮುಂದೆ ಇಂತಹ ಕೃತ್ಯ ಮರುಕಳಿಸದಂತೆ ಸಲಹೆ ನೀಡಲು ವಕೀಲರಿಗೆ ಸೂಚಿಸಿತು. ಇದರೊಂದಿಗೆ ಸುಬ್ರಹ್ಮಣ್ಯನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಹಾಗೂ ಅದರ ಆಧಾರದ ಮೇಲಿನ ಮುಂದಿನ ಕಾನೂನು ಪ್ರಕ್ರಿಯೆಯನ್ನು ರದ್ದುಪಡಿಸಿತು.

2021ರ ನ.1ರಂದು 22 ವರ್ಷದ ರಿತ್ವಿಕ್ ಶರ್ಮಾ ಅವರು ಕಿಂಗ್‌ಫಿಷರ್ ಬಿಯರ್ ಬಾಟಲಿಯ ಚಿತ್ರವೊಂದರ ಮೇಲೆ ಪುನೀತ್ ರಾಜಕುಮಾರ್ ಅವರನ್ನು ಅವಹೇಳನಗೊಳಿಸುವ ಪದಗಳನ್ನು ಬಳಸಿ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು. ಪುನೀತ್ ನಿಧನದ ಬಳಿಕ ಈ ಪೋಸ್ಟ್ ಮಾಡಲಾಗಿದ್ದು, ಇದರಿಂದ ಸಾಮಾಜಿಕ ಶಾಂತಿಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದೆ ಎಂದು ಆರೋಪಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದರು. ನ್ಯಾಯಾಲಯದ ಆದೇಶದಿಂದ ಪ್ರಕರಣಕ್ಕೆ ಸಂಬಂಧಿಸಿದ ಕ್ರಿಮಿನಲ್ ವಿಚಾರಣೆ ಅಂತ್ಯಗೊಂಡಿದ್ದರೂ, ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕ ವ್ಯಕ್ತಿಗಳ ಕುರಿತು ಯಾವುದೇ ವಿಷಯ ಪ್ರಕಟಿಸುವಾಗ ಜವಾಬ್ದಾರಿಯಿಂದ ವರ್ತಿಸುವ ಅಗತ್ಯವನ್ನು ಪೀಠ ಒತ್ತಿಹೇಳಿದೆ.

ಪೋಸ್ಟ್‌ನ ಸಂದರ್ಭ, ಭಾಷೆ ಹಾಗೂ ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಪರಿಗಣಿಸಿಯೇ ಸಾಮಾಜಿಕ ಮಾಧ್ಯಮ ಬಳಕೆ ಮಾಡಬೇಕು ಎಂದು ನ್ಯಾಯಾಲಯ ತಿಳಿಸಿದೆ.

## ನಿಗದಿತ ಸಮಯಕ್ಕೂ ಮುನ್ನ ಮದ್ಯದಂಗಡಿ ತೆರೆದರೆ ಕಠಿಣ ಕ್ರಮ: ಶಿವಲಿಂಗೇಗೌಡ

● ವಿಕ್ರಮ ವಾಹಿನಿ | ಮಂಗಳೂರು

ನಿಗದಿತ ಸಮಯಕ್ಕಿಂತ ಮೊದಲೇ ಮದ್ಯದಂಗಡಿಗಳನ್ನು ತೆರೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಬಕಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳೂರು ಜಿಲ್ಲಾ ಪಂಚಾಯಿತಿ ನೇತ್ರಾವತಿ ಸಭಾಂಗಣದಲ್ಲಿ ನಡೆದ ಮಂಗಳೂರು ವಿಭಾಗದ ಅಬಕಾರಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಮಯ ಪಾಲನೆ ಮಾಡದ ಮದ್ಯದಂಗಡಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**ಅಕ್ರಮ ಮದ್ಯಕ್ಕೆ ಕಡಿವಾಣ:** ಮಿಲಿಟರಿ ಕೋಟಾದಡಿ ದೊರೆಯುವ ಮದ್ಯದ ದುರ್ಬಳಕೆ ತಡೆಯಬೇಕು. ಗೋವಾದಿಂದ ರಾಜ್ಯಕ್ಕೆ ಅಕ್ರಮ ಮದ್ಯ ಸಾಗಾಟ ತಡೆಯಲು ಅಗತ್ಯವಿರುವೆಡೆ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಬೇಕು. ಕಳ್ಳಬಟ್ಟಿ ತಯಾರಿಕೆ ಹಾಗೂ ಮಾರಾಟದ ವಿರುದ್ಧವೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

ಎಲ್ಲ ಜಿಲ್ಲೆಗಳಲ್ಲಿ ಅಬಕಾರಿ ಭವನ: ಇಲಾಖೆಗೆ ಸ್ವಂತ ಹಾಗೂ ಸುಸಜ್ಜಿತ ಅಬಕಾರಿ ಭವನಗಳ ಅಗತ್ಯವಿದ್ದು,



ನಿರ್ದಿಷ್ಟ ವಿನ್ಯಾಸದಲ್ಲಿ ನಿರ್ಮಾಣಕ್ಕೆ ಯೋಜನಾ ವರದಿ ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು. ಸರ್ಕಾರದ ಅವಧಿ ಮುಗಿಯುವೊಳಗೆ ಎಲ್ಲ ಜಿಲ್ಲೆಗಳಲ್ಲಿ ಅಬಕಾರಿ ಭವನಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವುದಾಗಿ ಭರವಸೆ ನೀಡಿದರು.

ಖಾಲಿ ಹುದ್ದೆಗಳ ಭರ್ತಿಗೆ ವೇಗ: ಸಿಬ್ಬಂದಿ ಕೊರತೆ ನೀಗಿಸಲು ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ವೇಗ ನೀಡಲಾಗಿದ್ದು, ಒಳಮೀಸಲಾತಿ ಸಮಸ್ಯೆ ಇತ್ಯರ್ಥವಾದ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳುವಂತೆ ಅಬಕಾರಿ ಆಯುಕ್ತರಿಗೆ ಸೂಚಿಸಿದರು. ನೂತನ ಸಿಬ್ಬಂದಿಗೆ ಪೂರಕ ತರಬೇತಿ ನೀಡಲು ತರಬೇತಿ ಕೇಂದ್ರ ಆರಂಭಿಸುವ ಬಗ್ಗೆಯೂ ಚಿಂತಿಸಲಾಗುವುದು ಎಂದರು.

ಅಬಕಾರಿ ಇಲಾಖೆಯ ಸಿಬ್ಬಂದಿ ಎದುರಿಸುತ್ತಿರುವ ಮೂಲಸೌಕರ್ಯ ಹಾಗೂ ಮೂಲಭೂತ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಲಾಗುವುದು. ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಸಿಬ್ಬಂದಿಗೆ ಅಗತ್ಯ ತರಬೇತಿ ಮತ್ತು ಸೌಲಭ್ಯ ಕಲ್ಪಿಸುವುದರ ಜತೆಗೆ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯ ಪರ ಸರ್ಕಾರ ನಿಲ್ಲಲಿದೆ ಎಂದು ಸಚಿವರು ಹೇಳಿದರು.

ಅಕ್ರಮ ಮದ್ಯ ಮಾರಾಟ, ಸಾಗಾಟ ಹಾಗೂ ನಿಯಮ ಉಲ್ಲಂಘನೆಗಳ ಮೇಲೆ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು. ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಮೂಲಕ ಅಬಕಾರಿ ಇಲಾಖೆಗೆ ಉತ್ತಮ ಹೆಸರು ತರುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ಸಭೆಯಲ್ಲಿ ಅಬಕಾರಿ ಆಯುಕ್ತ ಆರ್. ವೆಂಕಟೇಶ್ ಕುಮಾರ್ ಸೇರಿದಂತೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮರು ಒತ್ತುವರಿ ಮಾಡಿದರೆ ಎಫ್‌ಐಆರ್, ವಸ್ತು ಜಪ್ತಿ: ಕೃಷ್ಣ ಬೈರೇಗೌಡ

● ವಿಕ್ರಮ ವಾಹಿನಿ | ಬೆಂಗಳೂರು


ತೆರವುಗೊಳಿಸಿದ ಪಾದಚಾರಿ ಮಾರ್ಗಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಮತ್ತೆ ಒತ್ತುವರಿ ಮಾಡಿದರೆ ವಸ್ತುಗಳನ್ನು ವಶಕ್ಕೆ ಪಡೆದು ದಂಡ ವಿಧಿಸುವುದರ ಜತೆಗೆ, ಪುನರಾವರ್ತಿತ ಉಲ್ಲಂಘನೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ, ಅನಾಥ ವಾಹನಗಳ ತೆರವು ಹಾಗೂ ಸ್ವಚ್ಛತಾ ಅಭಿಯಾನ ಕುರಿತು ಶುಕ್ರವಾರ ನಡೆದ ವರ್ಚುವಲ್ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ ಎರಡು ತಿಂಗಳಿನಿಂದ ನಡೆದ ಅಭಿಯಾನದಲ್ಲಿ ಐದು ನಗರ ಪಾಲಿಕೆಗಳ ವ್ಯಾಪ್ತಿಯ 1,373.32 ಕಿ.ಮೀ. ರಸ್ತೆಗಳಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ತೆರವುಗೊಳಿಸಿದ ಸ್ಥಳಗಳಲ್ಲಿ ಮರು ಒತ್ತುವರಿ ತಡೆಯಲು ಪ್ರತಿ ಪಾಲಿಕೆ ವ್ಯಾಪ್ತಿಯಲ್ಲಿ ಪೊಲೀಸ್ ಮತ್ತು ಪಾಲಿಕೆ ಅಧಿಕಾರಿಗಳ ಜಂಟಿ ಕಾರ್ಯಪಡೆ ರಚಿಸಿ, ನಿಯಮಿತ ಹಾಗೂ ಅನಿರೀಕ್ಷಿತ ತಪಾಸಣೆ ನಡೆಸಬೇಕು. ಮರು ಒತ್ತುವರಿ ಪ್ರಕರಣಗಳನ್ನು ಫೋಟೊ ಹಾಗೂ ಜಿಯೋ–ಟ್ಯಾಗ್ ಮಾಹಿತಿಯೊಂದಿಗೆ ದಾಖಲಿಸಬೇಕು ಎಂದು ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳ ಜೀವನೋಪಾಯಕ್ಕೆ ತೊಂದರೆಯಾಗದಂತೆ, ಪ್ರಮುಖ ರಸ್ತೆಗಳು ಮತ್ತು ಜಂಕ್ಷನ್‌ಗಳಲ್ಲಿ ಸಂಚಾರಕ್ಕೆ ಅಡ್ಡಿಯಾಗದ ಪರ್ಯಾಯ ಸ್ಥಳಗಳನ್ನು ಗುರುತಿಸಿ ನೀಡಬೇಕು. ನಿರ್ಬಂಧಿತ ರಸ್ತೆಗಳ ಕುರಿತು ವ್ಯಾಪಾರಿಗಳಿಗೆ ಸ್ಪಷ್ಟ ಮಾಹಿತಿ ನೀಡಬೇಕು ಎಂದರು.

**11,346 ಅನಾಥ ವಾಹನಗಳ ತೆರವು**



### ಜಪ್ತಿ ವಾಹನಗಳ ನಿಲುಗಡೆಗೆ ಕಂದಾಯ ಇಲಾಖೆ ನೀಡಿದ ಜಾಗಗಳ ವಿವರ

- ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹಗದೂರು ಗ್ರಾಮದ ಸ.ನಂ.135 ರಲ್ಲಿ 0–26 ಗುಂಟೆ ಜಮೀನನ್ನು ಕಾಯ್ದಿರಿಸಿ ದಿನಾಂಕ:02.09.2026 ರಂದು ಆದೇಶಿಸಲಾಗಿದೆ.
- ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಯರಪ್ಪನಹಳ್ಳಿ ಗ್ರಾಮದ ಸ.ನಂ.20 ರಲ್ಲಿ 0–35 ಗುಂಟೆ ಜಮೀನನ್ನು ಕಾಯ್ದಿರಿಸಿ ದಿನಾಂಕ:19.08.2026 ರಂದು ಆದೇಶಿಸಲಾಗಿದೆ.
- ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಸ.ನಂ.44 ರಲ್ಲಿ 1–01 ಎ/ಗು ಜಮೀನನ್ನು ಕಾಯ್ದಿರಿಸಿ ದಿನಾಂಕ:19.08.2026 ರಂದು ಆದೇಶಿಸಲಾಗಿದೆ.
- ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ ಗ್ರಾಮದ ಸ.ನಂ.23ರಲ್ಲಿ 15–00 ಎಕರೆ ಜಮೀನನ್ನು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
- ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ಬಾಗಲೂರು ಗ್ರಾಮದ ಸ.ನಂ.211ರಲ್ಲಿ 2–00 ಎಕರೆ ಜಮೀನನ್ನು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
- ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೊಮ್ಮಶೆಟ್ಟಿಹಳ್ಳಿ ಗ್ರಾಮದ ಸ.ನಂ.63 ರಲ್ಲಿ 4–00 ಎಕರೆ ಮತ್ತು ಗಿಡೇನಹಳ್ಳಿ ಗ್ರಾಮದ ಸ.ಸಂ.80 ರಲ್ಲಿ 2–00 ಎಕರೆ ಜಮೀನನ್ನು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ನಗರದ ವಿವಿಧ ಪೊಲೀಸ್ ಠಾಣೆಗಳ ಆವರಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ದೀರ್ಘಕಾಲದಿಂದ ನಿಂತಿರುವ ಸುಮಾರು 11,346 ಅನಾಥ ಮತ್ತು ಜಪ್ತಿ ವಾಹನಗಳನ್ನು ತ್ವರಿತವಾಗಿ ತೆರವುಗೊಳಿಸುವಂತೆ ಸಚಿವರು ಸೂಚಿಸಿದರು. ಇಂತಹ ವಾಹನಗಳ ನಿಲುಗಡೆಗೆ ನಗರದ ಹೊರವಲಯದಲ್ಲಿ 7 ಕಡೆಗಳಲ್ಲಿ ಸುಮಾರು 26 ಎಕರೆ ಜಾಗವನ್ನು ಕಂದಾಯ ಇಲಾಖೆ ಒದಗಿಸಿದೆ. ಹೀಗಾಗಿ ವಾಹನಗಳನ್ನು ನಿಗದಿತ ಸ್ಥಳಗಳಿಗೆ ಶೀಘ್ರ ಸ್ಥಳಾಂತರಿಸಬೇಕು ಎಂದರು.

ಟೋಯಿಂಗ್ ಯಾರ್ಡ್‌ಗಳಲ್ಲಿ ಬಾಕಿ ಇರುವ ವಾಹನಗಳನ್ನು ಕಾನೂನುಬದ್ಧವಾಗಿ ಹರಾಜು ಮಾಡುವ ಪ್ರಕ್ರಿಯೆ ವೇಗಗೊಳಿಸಬೇಕು. ಹರಾಜು ಸಾಧ್ಯವಾಗದ ದಶಕಗಳಷ್ಟು ಹಳೆಯ ವಾಹನಗಳನ್ನು ನೋಂದಾಯಿತ ಸ್ಕ್ರ್ಯಾಪ್ ಸಂಗ್ರಹಕಾರರಿಗೆ ಹಸ್ತಾಂತರಿಸುವ ಸಾಧ್ಯತೆಯನ್ನೂ ಪರಿಶೀಲಿಸುವಂತೆ ಸಲಹೆ ನೀಡಿದರು.

**5,267 ಟನ್ ತ್ಯಾಜ್ಯ ತೆರವು**

‘ತ್ಯಾಜ್ಯದಿಂದ ಸ್ವಾತಂತ್ರ್ಯ’ ಅಭಿಯಾನದಡಿ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 5,267.65 ಟನ್ ತ್ಯಾಜ್ಯ ತೆರವುಗೊಳಿಸಲಾಗಿದೆ. ಸ್ವಚ್ಛತಾ ಕಾರ್ಯವನ್ನು ಮುಂದುವರಿಸಿ ಪ್ರತಿ ವಾರ್ಡ್‌ನಲ್ಲಿ ನಿರಂತರ ಅಭಿಯಾನ ನಡೆಸಬೇಕು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಖಾಸಗಿ ನಿವೇಶನಗಳಲ್ಲಿ ತ್ಯಾಜ್ಯ ಸುರಿಯುವುದನ್ನು ತಡೆಯಲು ನಿಯಮಾನುಸಾರ ದಂಡ ವಿಧಿಸಿ, ಇ–ಖಾತೆ ಮೂಲಕ ದಂಡ ವಸೂಲಿ ಮಾಡುವ ಕ್ರಮ ಕೈಗೊಳ್ಳಬೇಕು ಎಂದರು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಸಾರಿಗೆ ಆಯುಕ್ತ ಡಾ. ಸೆಲ್ವಮಣಿ ಆರ್., ಜಂಟಿ ಪೊಲೀಸ್ ಆಯುಕ್ತ (ಸಂಚಾರ) ಕಾರ್ತಿಕ್ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



ಶುಕ್ರವಾರ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿದ ತೆಲುಗು ನಟ ರಾಮ್ ಚರಣ್ ಅವರ ಪತ್ನಿ ಹಾಗೂ ಅಪೋಲೋ ಆಸ್ಪತ್ರೆಯ ಸಿಎಸ್‌ಆರ್ ವಿಭಾಗದ ಉಪಾಧ್ಯಕ್ಷೆ ಉಪಾಸನಾ ಕೊನಿಡೇಲ ಅವರು, ಗ್ರಾಮ ದೇವತೆ ಮಂಚಾಲಮ್ಮ ಹಾಗೂ ರಾಯರ ವೃಂದಾವನಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರಿಂದ ಫಲಮಂತ್ರಾಕ್ಷತೆ ಹಾಗೂ ಪರಿಮಳ ಪ್ರಸಾದ ಸ್ವೀಕರಿಸಿ ಆಶೀರ್ವಾದ ಪಡೆದರು.

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481

ವಿಕ್ರಮ ವಾಹಿನಿ

# ಮುಂದಿನ ದಿನಗಳಲ್ಲಿ 10-12 ಕಡೆ ಸಚಿವ ಸಂಪುಟ ಸಭೆ

## ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಎರಡನೇ ಹೆಚ್ಚುವರಿ ಆಡಳಿತ ಭಾಷೆಯೆಂದು ಘೋಷಣೆ: ಡಿ.ಕೆ. ಶಿವಕುಮಾರ್

● ವಿಕ್ರಮ ವಾಹಿನಿ | ಮಂಗಳೂರು

ಬಹುಕಾಲದಿಂದ ನಿರೀಕ್ಷೆಯಲ್ಲಿದ್ದ ಮಹತ್ವದ ತುಳು ಭಾಷೆಗೆ ಎರಡನೇ ಹೆಚ್ಚುವರಿ ಆಡಳಿತ ಭಾಷೆಯ ಸ್ಥಾನಮಾನ ಕರಾವಳಿ ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ನೀತಿ 2026, 150 ಎಕರೆ ಪ್ರದೇಶದಲ್ಲಿ ಮೀನುಗಾರಿಕೆ ಪಾರ್ಕ್ ನಿರ್ಮಾಣ ಸೇರಿದಂತೆ 32,611 ಕೋಟಿ ರೂ. ವೆಚ್ಚದ ಯೋಜನೆಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿ ನಡೆಸಿ ಈ ಕುರಿತು ಮಾಹಿತಿ ನೀಡಿದ ಸಿಎಂ ಡಿ.ಕೆ. ಶಿವಕುಮಾರ್ ಇದರಲ್ಲಿ 16,000 ಕೋಟಿ ರೂ. ಗ್ರಾಮೀಣಾಭಿವೃದ್ಧಿ ಯೋಜನೆಯಾಗಿದ್ದು, ಉಳಿದ ಮೊತ್ತ ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದೆ ಎಂದು ವಿವರಿಸಿದರು.

**ಎರಡನೇ ಹೆಚ್ಚುವರಿ ಆಡಳಿತ ಭಾಷೆಯಾಗಿ ತುಳು:** ನಮ್ಮ ಸರ್ಕಾರ ಜನರ ಭಾವನೆಯನ್ನು ಗೌರವಿಸಿದೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆ ಎರಡನೇ ಆಡಳಿತ ಭಾಷೆಯಾಗಿ ಘೋಷಣೆಯಾಗಬೇಕೆನ್ನುವ ಬೇಡಿಕೆ ಬಹಳ ದಿನಗಳದ್ದು. ಹಿಂದಿನವರು ಈ ತೀರ್ಮಾನ ಏಕೆ ಮಾಡಲಿಲ್ಲ ಎಂದು ಚರ್ಚಿಸುವುದಿಲ್ಲ. ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ. ಸಭೆಯಲ್ಲಿ ಅನೇಕ ಸಲಹೆಗಳು ಬಂದಿವೆ.

**ಬದ್ಧತೆ ಇರುವ ಸರ್ಕಾರ:** ನಮಗೆ ಬದ್ಧತೆ ಇದೆ. ನಾವು ಜನರ ಭಾವನೆ ಮೇಲಲ್ಲ; ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ. ಭಾವನೆಗಳ ಆಧಾರದ ಮೇಲೆ ಸಮಾಜ ಕಟ್ಟಲ್ಲ. ಸಾಮಾಜಿಕ ಆರ್ಥಿಕ ಶಕ್ತಿ ತುಂಬಿ ಬದುಕು ಕಟ್ಟಿಕೊಡಲಾಗುವುದು ಎಂದು ತಿಳಿಸಿದರು.

ಅವಶ್ಯತೆ ಇದ್ದಲ್ಲಿ ಆರ್ಥಿಕ ಹಾಗೂ ಕಾನೂನು ಚೌಕಟ್ಟು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಸಚಿವ ಸಂಪುಟ ಸಭೆ ನಡೆಸುವ ತೀರ್ಮಾನ ಮಾಡಿ ಆಗ ಅಗತ್ಯವಿರುವ ವಿಚಾರಗಳ ಬಗ್ಗೆ ತೀರ್ಮಾನಿಸಲಾಗುವುದು. ಇದು ಟೀಮ್ ಕರ್ನಾಟಕ.

ಸಚಿವ ಸಂಪುಟ ನಿಮ್ಮ ಜೊತೆ ಇದೆ. ತುಳು ಭಾಷೆಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿ ರಾಜ್ಯದ ಹೆಚ್ಚುವರಿ ಆಡಳಿತ ಭಾಷೆಯಾಗಿ ಘೋಷಣೆ ಮಾಡಲಾಗುವುದು.




ಮಾಜಿ ಸಚಿವ ರಮಾನಾಥ ರೈ ಅವರು ತುಳು ಭಾಷೆಗೆ 2 ನೇ ಹೆಚ್ಚುವರಿ ಭಾಷೆಯಾಗಿ ಘೋಷಿಸಲು ಮೊದಲು ಬೇಡಿಕೆ ಇಟ್ಟಿದ್ದರು ಎಂದು ಸ್ಮರಿಸಿದರು. ಸಚಿವ ಯು.ಟಿ. ಖಾದರ್, ಶಾಸಕ ಅಶೋಕ್ ಕುಮಾರ್ ರೈ ಸೇರಿದಂತೆ ಹಲವು ಜನಪ್ರತಿನಿಧಿಗಳು ಒಟ್ಟಾಗಿ ಒತ್ತಡ ಹೇರಿದ್ದರು ಎಂದು ಅವರು ತಿಳಿಸಿದರು. ತುಳು ಭಾಷೆ ಎರಡನೇ ಹೆಚ್ಚುವರಿ ಆಡಳಿತ ಭಾಷೆಯಾಗಿ ಅಂಗೀಕರಿಸಿದ ಹಿನ್ನೆಲೆಯಲ್ಲಿ ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಮುಖ್ಯಮಂತ್ರಿಗಳು ಅಭಿನಂದಿಸಿದರು.

**ದಕ್ಷಿಣ ಕನ್ನಡಕ್ಕೆ ಮಂಗಳೂರು ಮರುನಾಮಕರಣ: ಜನಾಭಿಪ್ರಾಯ ಸಂಗ್ರಹ:** ಮಂಗಳೂರಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಇದೆ. ದಕ್ಷಿಣ ಕನ್ನಡದ ಬದಲಿಗೆ ಮಂಗಳೂರು ಎಂದು ಹೆಸರಿಸುವ ಬಗ್ಗೆ ಜನಾಭಿಪ್ರಾಯ ಪಡೆದು ತೀರ್ಮಾನಿಸಲಾಗುವುದು. ಕರಡು ಅಧಿಸೂಚನೆ ಹೊರಡಿಸಿ ಒಂದು ತಿಂಗಳ ಅವಧಿ ನೀಡಿ, ಜನರ ಭಾವನೆ, ಜನರ ಅಭಿಪ್ರಾಯ ಪಡೆದು ತೀರ್ಮಾನಿಸಲಾಗುವುದು ಎಂದರು.

**ಕರಾವಳಿ ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ನೀತಿ:** ಕರಾವಳಿ ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ನೀತಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಈವರೆಗಿನ ಎಲ್ಲಾ ನೀತಿಗಳಿಗಿಂತ ಭಿನ್ನವಾದ ನೀತಿ ಇದಾಗಲಿದೆ. ಹೂಡಿಕೆದಾರರಿಗೆ ಹೆಚ್ಚಿನ ಶಕ್ತಿ ಹಾಗೂ ಸಾಲ ಮರುಪಾವತಿಗೆ ಸಮಯಾವಕಾಶ ನೀಡಲಾಗುವುದು. ಮಲೆನಾಡು ಒಳಗೊಂಡಂತೆ ಕರಾವಳಿ ಪ್ರದೇಶದಲ್ಲಿ ಹೊಸ ಪ್ರವಾಸೋದ್ಯಮ ನೀತಿ ಮೂಲಕ ಪ್ರವಾಸೋದ್ಯಮ ಯೋಜನೆಗಳನ್ನು ಮೂಲಸೌಕರ್ಯ ಯೋಜನೆಗಳೆಂದು ಪರಿಗಣಿಸಲಾಗುವುದು. ಅಲ್ಲದೆ ಅನೇಕ ಪ್ರೋತ್ಸಾಹಕಗಳನ್ನು ನೀಡಲು ಯೋಜಿಸಲಾಗಿದೆ ಎಂದು ಅವರು ತಿಳಿಸಿದರು.

**ಮೀನುಗಾರಿಕಾ ವಿಶ್ವವಿದ್ಯಾಲಯ:** ಮೀನುಗಾರಿಕೆಗೆ ಸಂಬಂಧಿಸಿದಂತೆ Fisheries, Blue economy university ಯನ್ನು ಸ್ಥಾಪಿಸಲಾಗುವುದು. ಪ್ರಸ್ತುತ ಮೀನುಗಾರಿಕಾ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶವನ್ನು 60 ರಿಂದ 200 ಸೀಟುಗಳಿಗೆ ಹೆಚ್ಚಳ ಮಾಡಲಾಗುವುದು ಎಂದು ತಿಳಿಸಿದರು.

ಈ ಭಾಗದಲ್ಲಿ ಕಿದ್ವಾಯಿ, ಜಯದೇವ ಆಸ್ಪತ್ರೆಗೆ ಬೇಡಿಕೆ ಬಂದಿದೆ ಎಂದು ತಿಳಿಸಿದ ಅವರು ಪುತ್ತೂರಿನಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ 549 ಕೋಟಿ ರೂ. ಗಳಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

**ಮುಂದಿನ ದಿನಗಳಲ್ಲಿ 10–12 ಕಡೆ ಸಚಿವ ಸಂಪುಟ ಸಭೆ**

ಬೆಂಗಳೂರಿನಿಂದಾಚೆಗೆ ಮಂಗಳೂರಿನಲ್ಲಿ ಮೊದಲ ಬಾರಿ ಸಚಿವ ಸಂಪುಟ ಸಭೆ ನಡೆಸಿರುವುದು ಸ್ವಾಗತಾರ್ಹ. ಇತರ ಜಿಲ್ಲೆಗಳಲ್ಲೂ ಸಚಿವ ಸಂಪುಟ ಸಭೆ ನಡೆಸುವಿರಾ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು, ಮುಂದಿನ 15 ತಿಂಗಳ ಅವಧಿಯಲ್ಲಿ 10 – 12 ಸ್ಥಳಗಳಲ್ಲಿ ಸಚಿವ ಸಂಪುಟ ಸಭೆ ನಡೆಸುವ ಉದ್ದೇಶವಿದೆ. ಎಲ್ಲಿ ಸಾಮರ್ಥ್ಯವಿದೆ, ಅಗತ್ಯವಿದೆ– ಅಲ್ಲಿ ಸಚಿವ ಸಂಪುಟ ಸಭೆ ನಡೆಸಲಾಗುವುದು ಎಂದು ಅವರು ತಿಳಿಸಿದರು. ಸಮಗ್ರ ಕರ್ನಾಟಕ, ಸಮೃದ್ಧ ಕರ್ನಾಟಕವಾಗಿಸುವುದು ನಮ್ಮ ಗುರಿ ಎಂದು ಅವರು ವಿವರಿಸಿದರು.

**ದೇಶದಲ್ಲೇ ಗಮನ ಸೆಳೆದ ದಕ್ಷಿಣ ಕನ್ನಡ:** ಇಂದು ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ವಿವಿಧ ಆಯಾಮದ ಅಭಿವೃದ್ಧಿ ಯೋಜನೆಗಳನ್ನು ನೀಡುತ್ತಿದ್ದೀರಿ. ರಾಜ್ಯದ ಇತರ ಭಾಗಗಳಿಗೂ ಇದನ್ನು ವಿಸ್ತರಿಸುವಿರಾ? ಎಂಬ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಖಂಡಿತವಾಗಿ ವಿಸ್ತರಿಸಲಾಗುವುದು ಎಂದರು. ಜೊತೆಗೆ ದಕ್ಷಿಣ ಕನ್ನಡ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ದೇಶದಲ್ಲೇ ಗಮನ ಸೆಳೆದಿದೆ. ದೇಶಕ್ಕೆ 6 ರಾಷ್ಟ್ರೀಕೃತ ಬ್ಯಾಂಕುಗಳನ್ನು ನೀಡಿ ಆರ್ಥಿಕ ಶಕ್ತಿಯನ್ನು ಹೊಂದಿರುವ ಸ್ಥಳವಿದು. ಬಂದರುಗಳಿವೆ. ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಪ್ರಮುಖ ಕೇಂದ್ರವಾಗಿದೆ ಎಂದು ವಿವರಿಸಿದರು.

**ಕಸ್ತೂರಿ ರಂಗನ್ ವರದಿ: ಸಭೆಗಳಲ್ಲಿ ಭಾಗಿ:** ಇಂದು ಹೆಬ್ರಿಯಲ್ಲಿ ಕಸ್ತೂರಿರಂಗನ್ ವರದಿ ಬಗ್ಗೆ ಸಭೆಯಲ್ಲಿ ಪಾಲ್ಗೊಳ್ಳಲಿದ್ದು, ನಾಳೆ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜನರ ಅಭಿಪ್ರಾಯ ಪಡೆಯಲಾಗುವುದು ಎಂದು ತಿಳಿಸಿದರು. ಪ್ರಾರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ತೋರಿಸಿದ ಅಭಿಮಾನ, ಸ್ವಾಗತಕ್ಕೆ ಕೃತಜ್ಞತೆ ಸಲ್ಲಿಸಿದ ಮುಖ್ಯಮಂತ್ರಿಗಳು, ದಕ್ಷಿಣ ಕನ್ನಡ ಜಿಲ್ಲೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಬೆಳೆದಿರುವ ಜಿಲ್ಲೆ. ಇಡೀ ದೇಶ ದಕ್ಷಿಣ ಕನ್ನಡದ ಇತಿಹಾಸ ಪರಂಪರೆಯನ್ನು ತಿಳಿದಿದೆ. ಈ ಜಿಲ್ಲೆಯ ಅಭಿವೃದ್ಧಿಗೆ ನಾವು ಅಳಿಲು ಸೇವೆ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲ ಬಾರಿಗೆ ಸಚಿವ ಸಂಪುಟ ಸಭೆಯನ್ನು ನಡೆಸಲಾಗಿದೆ ಎಂದರು.

ಪಕ್ಷಭೇದ ಮರೆತು ಶಾಸಕರು, ಸಂಸದರು, ವಿಧಾನಪರಿಷತ್ತು ಸದಸ್ಯರೂ ಸೇರಿದಂತೆ ಸಲಹೆ ನೀಡಿ, ಜಿಲ್ಲೆಯ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದು ಅವರು ತಿಳಿಸಿದರು.

**ಭಾಷೆಯ ಕುರಿತ ಭಾವನೆ ದೊಡ್ಡದು:** ತುಳು ಭಾಷೆಯನ್ನು ಆಡಳಿತ ಭಾಷೆಯಾಗಿ ಘೋಷಿಸುವ ಕುರಿತು ಈ ಭಾಗದ ಜನರ ಭಾವನೆ, ಒತ್ತಡಗಳ ಕುರಿತು ವಿವರಿಸಿದ ಮುಖ್ಯಮಂತ್ರಿಗಳು, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಶಾಸಕರಾದ ನಂತರ ಅಧಿವೇಶನದಲ್ಲಿ ಕೇಳಿದ ಮೊದಲ ಪ್ರಶ್ನೆ ತುಳು ಭಾಷೆಯ ಕುರಿತಾದುದು. ನನಗೆ ಆಶ್ಚರ್ಯವಾಗಿತ್ತು. ಆದರೆ ಅವರ ಮೊದಲ ಭಾವನೆ ಇದ್ದದ್ದು ಭಾಷೆಯ ಮೇಲೆ. ಇಂದು ಅವರು 500 ಕೋಟಿ ಮೆಡಿಕಲ್ ಕಾಲೇಜು ಮಂಜೂರು ಮಾಡಿಸಿಕೊಂಡು ಲಾಟರಿ ಹೊಡೆದಿದ್ದಾರೆ, ಅದು ಬೇರೆ ವಿಷಯ. ಯು.ಟಿ. ಖಾದರ್ ಆಗ ಸ್ಪೀಕರ್ ಆಗಿದ್ದರು. ಇಬ್ಬರೂ ತುಳುವಿನಲ್ಲಿ ಮಾತನಾಡುತ್ತ, ಇತರರೂ ಸೇರಿ ಒತ್ತಡ ಹೇರಿದರು ಎಂದು ಸ್ಮರಿಸಿದರು.

ಕರಾವಳಿ ಭಾಗದ ಅಭಿವೃದ್ಧಿಗೆ ಅನುಮೋದಿಸಿರುವ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸುವುದರ ಜತೆಗೆ, ಸ್ಥಳೀಯ ಜನರ ಅಗತ್ಯ ಹಾಗೂ ಸಲಹೆಗಳಿಗೆ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಕರಾವಳಿ–ಮಲೆನಾಡು ಪ್ರದೇಶದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಮೂಲಸೌಕರ್ಯ, ಪ್ರವಾಸೋದ್ಯಮ, ಶಿಕ್ಷಣ, ಆರೋಗ್ಯ ಹಾಗೂ ಮೀನುಗಾರಿಕೆ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಲಾಗುವುದು ಎಂದು ಹೇಳಿದರು.

### ನಮಗೆ ರಾಜಕೀಯಕ್ಕಿಂತ ಜನರ ಬದುಕು ಮುಖ್ಯ: ಸಿಎಂ

● ವಿಕ್ರಮ ವಾಹಿನಿ | ಮಂಗಳೂರು

"ನಮಗೆ ರಾಜಕೀಯಕ್ಕಿಂತ ಜನರ ಬದುಕು ಮುಖ್ಯ. ಯಾವುದೇ ಪಕ್ಷದ ನಾಯಕರು ಗಾಬರಿಯಾಗುವ ಅಗತ್ಯವಿಲ್ಲ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು.

ಮಂಗಳೂರಿನಲ್ಲಿ ಸರ್ಕಿಟ್ ಹೌಸ್ ಬಳಿ ಮಾಧ್ಯಮಗಳಿಗೆ ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿದರು.

"ನಾವು ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ ಹೊರತು, ಜನರ ಭಾವನೆ ಮೇಲೆ ರಾಜಕೀಯ ಮಾಡಲ್ಲ. ಎಲ್ಲರ ಚಿಂತನೆಯಂತೆ ನಮ್ಮ ಸರ್ಕಾರ ಕೆಲಸ ಮಾಡಲಿದೆ" ಎಂದು ಭರವಸೆ ನೀಡಿದರು.

"ಗಾಂಧಿ ಅವರು ಉಳಿದುಕೊಂಡಿದ್ದ ಮನೆಗೆ ಹೋಗಿ ಅಲ್ಲಿ ಉಪಹಾರ ಸೇವಿಸಿದೆ. ಮಂಗಳೂರು ಬನ್ಸ್, ದೋಸೆ ಸವಿದೆ. ಜಿಲ್ಲಾಮಂತ್ರಿಗಳು ಎಲ್ಲಿ ಕರೆದುಕೊಂಡು ಹೋಗುತ್ತಾರೊ ಅಲ್ಲಿಗೆ ಹೋಗುವೆ" ಎಂದು ಹೇಳಿದರು.

## ಟಿ. ನರಸೀಪುರದಲ್ಲಿ ಗಣೇಶ ಶೋಭಾಯಾತ್ರೆ: ಮಸೀದಿ ಬಳಿ ಪಟಾಕಿ

● ವಿಕ್ರಮ ವಾಹಿನಿ | ಟಿ. ನರಸೀಪುರ

*ಗಣೇಶೋತ್ಸವದ ಅಂಗವಾಗಿ ಪಟ್ಟಣದಲ್ಲಿ ಶುಕ್ರವಾರ ನಡೆದ ಶೋಭಾಯಾತ್ರೆ ಬಿಗಿ ಪೊಲೀಸ್ ಭದ್ರತೆಯ ನಡುವೆ ಶಾಂತಿಯುತವಾಗಿ ಮುಕ್ತಾಯಗೊಂಡಿತು. ಲಿಂಕ್ ರಸ್ತೆಯ ಮಸೀದಿ ಮುಂಭಾಗ ಪಟಾಕಿ ಸಿಡಿಸದಂತೆ ಪೊಲೀಸರು ಸೂಚಿಸಿದ್ದರೂ, ಕೆಲ ಕಾರ್ಯಕರ್ತರು ಮಸೀದಿ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.*

*ಹಿಂದೂ ಮಹಾಸಭಾ ಹಾಗೂ ಹಿಂದೂ ಜಾಗರಣ ವೇದಿಕೆ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಸಾವಿರಾರು ಕಾರ್ಯಕರ್ತರು ಹಾಗೂ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಮಾಜಿ ಸಂಸದ ಪ್ರತಾಪ್ ಸಿಂಹ ಕೂಡ ಮೆರವಣಿಗೆಯಲ್ಲಿ ಭಾಗವಹಿಸಿ, ಪೊಲೀಸ್ ಅಧಿಕಾರಿಯ ಸೂಚನೆ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಇದಕ್ಕೆ ರಾಜಕೀಯವಾಗಿ ಉತ್ತರ ನೀಡುವುದಾಗಿ ಅವರು ಹೇಳಿಕೆ ನೀಡಿದರು.*

*ಶೋಭಾಯಾತ್ರೆ ಹಿನ್ನೆಲೆಯಲ್ಲಿ ಮಸೀದಿ ಸುತ್ತಮುತ್ತ ಕೆಎಸ್ಆರ್‌ಪಿ, ಮೀಸಲು ಪೊಲೀಸ್ ಪಡೆ ಹಾಗೂ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.*

*ನಾಲ್ಕು ಮೀಸಲು ಪೊಲೀಸ್ ವಾಹನಗಳನ್ನು ಸ್ಥಳದಲ್ಲಿ ಇರಿಸಲಾಗಿದ್ದು, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ದಂಡಿ ಭದ್ರತಾ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡಿದರು.*



ಮಂಗಳೂರಿನ ಸರ್ಕಿಟ್ ಹೌಸ್ ಬಳಿಯ ಯುದ್ಧ ಸ್ಮಾರಕಕ್ಕೆ ಸಿಎಂ ಡಿ ಕೆ ಶಿವಕುಮಾರ್ ಅವರು ಶುಕ್ರವಾರ ಪುಷ್ಪ ನಮನ ಸಲ್ಲಿಸಿದರು. ಸಚಿವರಾದ ಯು ಟಿ ಖಾದರ್, ನಿವೃತ್ತ ಯೋಧರು ಉಪಸ್ಥಿತರಿದ್ದರು.

## ಪಿಜಿ ಡೆಂಟಲ್ 2ನೇ ಸುತ್ತಿನ ಕೌನ್ಸೆಲಿಂಗ್ ಇಂದಿನಿಂದ

● ವಿಕ್ರಮ ವಾಹಿನಿ | ಬೆಂಗಳೂರು

ಪಿಜಿ ಡೆಂಟಲ್ ಕೋರ್ಸ್‌ಗಳ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಸೆ.19ರಿಂದ ಆರಂಭವಾಗಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ. ಮೊದಲ ಸುತ್ತಿನಲ್ಲಿ ಚಾಯ್ಸ್–3 ಅಥವಾ ಇತರ ಆಯ್ಕೆ ದಾಖಲಿಸಿರುವ ಅಭ್ಯರ್ಥಿಗಳು ಸೆ.19ರಿಂದ 22ರವರೆಗೆ 1 ಲಕ್ಷ ಕಾಷನ್ ಡೆಪಾಸಿಟ್ ಪಾವತಿಸಬೇಕು. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 50 ಸಾವಿರ ಠೇವಣಿ ನಿಗದಿಯಾಗಿದೆ. ಚಾಯ್ಸ್–2 ಆಯ್ಕೆ ಮಾಡಿಕೊಂಡು ಶುಲ್ಕ ಪಾವತಿಸಿರುವವರಿಗೆ ಠೇವಣಿ ಅಗತ್ಯವಿಲ್ಲ.

ಸೆ.19ರಂದು ಬೆಳಿಗ್ಗೆ 11ಕ್ಕೆ ಸೀಟ್ ಮ್ಯಾಟ್ರಿಕ್ಸ್ ಪ್ರಕಟವಾಗಲಿದ್ದು, ಸೆ.19ರಿಂದ 23ರವರೆಗೆ ಆಯ್ಕೆ ಬದಲಾವಣೆ, ಅಳಿಸುವಿಕೆ ಹಾಗೂ ಮಾರ್ಪಾಡಿಗೆ ಅವಕಾಶವಿದೆ. ಸೆ.23ರಂದು ಸಂಜೆ 4ಕ್ಕೆ ತಾತ್ಕಾಲಿಕ ಹಾಗೂ ಸೆ.24ರಂದು ಬೆಳಿಗ್ಗೆ 10ಕ್ಕೆ ಅಂತಿಮ ಫಲಿತಾಂಶ ಪ್ರಕಟವಾಗಲಿದೆ.

ಸೆ.24ರಿಂದ 28ರವರೆಗೆ ಶುಲ್ಕ ಪಾವತಿಸಿ ಮೂಲ ದಾಖಲೆಗಳನ್ನು ಸಲ್ಲಿಸಬೇಕು. ಆಯ್ಕೆಯಾದವರು ಸೆ.29ರೊಳಗೆ ಪ್ರವೇಶ ಆದೇಶ ಪಡೆದು ಕಾಲೇಜಿಗೆ ಹಾಜರಾಗಬೇಕು ಎಂದು ಕೆಇಎ ತಿಳಿಸಿದೆ.

ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಠೇವಣಿ ಪಾವತಿ, ಆಯ್ಕೆ ದಾಖಲಿಸುವಿಕೆ ಹಾಗೂ ದಾಖಲೆ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳಿಸಬೇಕು.

## ಆಸ್ತಿ ಶುಲ್ಕದ ಮೇಲೆ ವಿಧಿಸಿರುವ ಸಾಫ್ಟ್ ವೇರ್ ಶುಲ್ಕ ರದ್ಧತಿಗೆ ಬಿಜೆಪಿ ಆಗ್ರಹ

● ವಿಕ್ರಮ ವಾಹಿನಿ | ಬೆಂಗಳೂರು

ರಾಜ್ಯದಲ್ಲಿ ಆಸ್ತಿ ತೆರಿಗೆ ಪಾವತಿದಾರರ ಮೇಲೆ ಸರ್ಕಾರ ಹೊಸದಾಗಿ ಸಾಫ್ಟ್ ವೇರ್ ಶುಲ್ಕದ ಹೊರೆ ಹೊರಿಸಿರುವುದು ಈಗ ಭಾರೀ ರಾಜಕೀಯ ಕಾಳಗಕ್ಕೆ ಕಾರಣವಾಗಿದೆ. ವಸತಿ ಆಸ್ತಿಗಳಿಗೆ ಪ್ರತಿ ಸ್ವತ್ತಿಗೆ 200 ಹಾಗೂ ವಾಣಿಜ್ಯ ಆಸ್ತಿಗಳಿಗೆ 1,000 ಸಾಫ್ಟ್ ವೇರ್ ವೆಚ್ಚವನ್ನು ವಿಧಿಸಿರುವುದನ್ನು ಖಂಡಿಸಿ ಪ್ರತಿಪಕ್ಷ ಬಿಜೆಪಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ.

ಸರ್ಕಾರದ ತಂತ್ರಜ್ಞಾನ ವ್ಯವಸ್ಥೆ ಮತ್ತು ತಂತ್ರಾಂಶಗಳ ಉನ್ನತೀಕರಣಕ್ಕೆ ಸಾರ್ವಜನಿಕರ ಜೇಬಿನಿಂದ ಏಕಪಕ್ಷೀಯವಾಗಿ ಹಣ ವಸೂಲಿ ಮಾಡುತ್ತಿರುವುದು ಎಷ್ಟು ಸರಿ? ಎಂದು ಬಿಜೆಪಿ ಗಂಭೀರವಾಗಿ ಪ್ರಶ್ನಿಸಿದೆ.

ವಿಧಿಸಲಾಗಿರುವ ಈ ಶುಲ್ಕದ ಸಂಪೂರ್ಣ ವಿವರ (ಬ್ರೇಕ್ ಅಪ್) ಮತ್ತು ಹೊಣೆಗಾರಿಕೆಯನ್ನು ಸಾರ್ವಜನಿಕರ ಮುಂದಿಡಬೇಕು. ಡಿಜಿಟಲೀಕರಣ ಮತ್ತು ಆಡಳಿತ ಸುಧಾರಣೆ ಹೆಸರಿನಲ್ಲಿ ನಾಗರಿಕರ ಮೇಲೆ ಅನಗತ್ಯ ಆರ್ಥಿಕ ಹೊರೆ ಹೇರಲಾಗುತ್ತಿದ್ದು, ತಕ್ಷಣವೇ ಈ ಶುಲ್ಕವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದೆ.

ಸರ್ಕಾರದ ಈ ನೂತನ ನಿರ್ಧಾರವನ್ನು ಹಿಂದಿನ ಸರಣಿ ತೆರಿಗೆ ಮತ್ತು ದರ ಏರಿಕೆಗಳೊಂದಿಗೆ ಜೋಡಿಸಿ ಸಾರ್ವಜನಿಕ ವಲಯದಲ್ಲೂ ಅಸಮಾಧಾನ ವ್ಯಕ್ತವಾಗುತ್ತಿದೆ. ಗ್ಯಾರಂಟಿ ಯೋಜನೆಗಳ ನಿರ್ವಹಣೆಯ ನೆಪದಲ್ಲಿ ಇತ್ತೀಚಿನ ತಿಂಗಳುಗಳಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಮತ್ತು ವಿದ್ಯುತ್ ಶುಲ್ಕಗಳನ್ನು ಹೆಚ್ಚಿಸಲಾಗಿತ್ತು.ಇತ್ತೀಚೆಗಷ್ಟೆ ರಾಜ್ಯಾದ್ಯಂತ ಆಸ್ತಿ ಮಾರ್ಗಸೂಚಿ ದರಗಳನ್ನು ಹೆಚ್ಚಿಸುವ ಮೂಲಕ ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಹೊರೆ ಹೆಚ್ಚಿಸಲಾಗಿತ್ತು.

ಇದೀಗ ಪಾಲಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಇ–ಆಡಳಿತ ಆಪ್‌ಗಳು ಹಾಗೂ ತಂತ್ರಾಂಶಗಳ ನಿರ್ವಹಣೆಗೆ ತೆರಿಗೆದಾರರೇ ಹಣ ನೀಡಬೇಕು ಎನ್ನುವ ಹೊಸ ನಿಯಮ ತಂದಿರುವುದು ಸಾರ್ವಜನಿಕರಲ್ಲಿ ಆಕ್ರೋಶ ಮೂಡಿಸಿದೆ.

ಒಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ, ಯಾವುದೇ ಮುನ್ಸೂಚನೆ ಇಲ್ಲದೆ ಆಸ್ತಿ ತೆರಿಗೆಯಲ್ಲಿ ತಂತ್ರಜ್ಞಾನದ ಹೆಸರಿನಲ್ಲಿ ಸಾಫ್ಟ್‌ವೇರ್ ಶುಲ್ಕ ಸೇರಿಸಿರುವುದು ಗಾಯದ ಮೇಲೆ ಬಿಸಿ ತುಪ್ಪ ಸುರಿದಂತಾಗಿದೆ. ಸರ್ಕಾರ ಈ ಜನವಿರೋಧಿ ನಿರ್ಧಾರವನ್ನು ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ನಡೆಸುವುದಾಗಿ ವಿರೋಧ ಪಕ್ಷಗಳು ಎಚ್ಚರಿಸಿವೆ.

**ಕಾಂಗ್ರೆಸ್ ಸರ್ಕಾರಕ್ಕೆ ಬಿಜೆಪಿಯ ಪ್ರಶ್ನೆಗಳು**

ಹೊಸ ಶುಲ್ಕದ ಕುರಿತು ಬಿಜೆಪಿ ಮುಖ್ಯವಾಗಿ ಮೂರು ಅಂಶಗಳನ್ನು ಮುಂದಿಟ್ಟಿದ್ದು, 200 ಮತ್ತು 1,000 ಶುಲ್ಕ ನಿಗದಿಪಡಿಸಲು ಬಳಸಿದ ವೆಚ್ಚದ ಲೆಕ್ಕಾಚಾರವೇನು? ಸಾಫ್ಟ್‌ವೇರ್ ಅಭಿವೃದ್ಧಿ, ನಿರ್ವಹಣೆ ಮತ್ತು ತಾಂತ್ರಿಕ ಸೇವೆಗೆ ಒಟ್ಟು ಎಷ್ಟು ಹಣ ಖರ್ಚಾಗುತ್ತಿದೆ? ಈ ವೆಚ್ಚವನ್ನು ಸಾಮಾನ್ಯ ಆಡಳಿತ ವೆಚ್ಚವಾಗಿ ಭರಿಸುವ ಬದಲು ತೆರಿಗೆದಾರರ ಮೇಲೆ ಪ್ರತ್ಯೇಕ ಶುಲ್ಕವಾಗಿ ಹಾಕಿರುವುದಕ್ಕೆ ಕಾರಣವೇನು? ಸರ್ಕಾರ ಬಹಿರಂಗಪಡಿಸಬೇಕು ಅಥವಾ ಶುಲ್ಕವನ್ನು ಹಿಂಪಡೆಯಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ಏಕಾಏಕಿ ಹೊರೆ ಹಾಕಿರುವುದು ಸರಿಯಲ್ಲ. ತೆರಿಗೆ ಸಂಗ್ರಹ ವ್ಯವಸ್ಥೆಯ ಡಿಜಿಟಲೀಕರಣದ ವೆಚ್ಚವನ್ನು ನಾಗರಿಕರ ಮೇಲೆಯೇ ವರ್ಗಾಯಿಸದೆ, ಸರ್ಕಾರವೇ ಭರಿಸಬೇಕು. ಈ ಕುರಿತು ಸರ್ಕಾರ ಕೂಡಲೇ ಸ್ಪಷ್ಟನೆ ನೀಡಿ, ಶುಲ್ಕ ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಆಗ್ರಹಿಸಿದೆ.

## ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ, ಯಾವುದೇ ಸಾಧನೆಯಾಗಲ್ಲ: ಆರ್.ಅಶೋಕ್

● ವಿಕ್ರಮ ವಾಹಿನಿ | ಬೆಂಗಳೂರು

ಕಾಂಗ್ರೆಸ್ ಸರ್ಕಾರ ಏನೋ ಸಾಧನೆ ಮಾಡುತ್ತೇವೆ ಎಂದುಕೊಂಡು ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಮಾಡಿದೆ. ಆದರೆ ಯಾವುದೇ ಯೋಜನೆಗಳು ಕರಾವಳಿಗೆ ಸಿಗುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಮಾಗಡಿಯಲ್ಲಿ ಬಿಜೆಪಿಯ ನೂತನ ಕಚೇರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಕಾಂಗ್ರೆಸ್ ಸರ್ಕಾರ ಏನೋ ಸಾಧನೆ ಮಾಡುತ್ತೇವೆ ಎಂದುಕೊಂಡು ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಮಾಡಿದೆ. ಹಿಂದಿನ ಸಿಎಂ ಸಿದ್ದರಾಮಯ್ಯ ಕಲಬುರ್ಗಿಯಲ್ಲಿ ಸಚಿವ ಸಂಪುಟ ಸಭೆ ಮಾಡಿ ಐದಾರು ಸಾವಿರ ಕೋಟಿ ರೂ. ಘೋಷಣೆ ಮಾಡಿದ್ದರು. ಆದರೆ ಏನೂ ಸಾಧನೆಯಾಗಲಿಲ್ಲ. ಈಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೆಸಾರ್ಟ್‌ಗೆ ಹೋಗಿ ಮೀನು ತಿಂದು ಈಗ ಸಚಿವ ಸಂಪುಟ ಸಭೆ ಮಾಡಿದ್ದಾರೆ. ಇದು ಕೂಡ ಮೂಗಿಗೆ ತುಪ್ಪ ಸವರುವ ಪ್ರಯತ್ನವಾಗಲಿದೆ. ಹಣವಿದ್ದರೆ ಸಾಲ ಮಾಡದೆ ಬಜೆಟ್ ಮಂಡಿಸುತ್ತೇನೆ ಎಂದು ಹೇಳಬೇಕು. ಈ ಬಾರಿ ಒಂದೂವರೆ ಲಕ್ಷ ಕೋಟಿ ರೂ. ಸಾಲ ಮಾಡಿ ಬಜೆಟ್ ಮಂಡಿಸಿ, ಅದರ ಬಡ್ಡಿ ಕಟ್ಟಲು ಕೂಡ ಆಗುತ್ತಿಲ್ಲ. ಸಾರಿಗೆ ನಿಗಮಗಳಿಗೆ 5,000 ಕೋಟಿ ರೂ. ನೀಡಬೇಕಿದೆ. ನೌಕರರಿಗೆ ಸಂಬಳ ಕೂಡ ಕೊಟ್ಟಿಲ್ಲ. ಅಂಗನವಾಡಿ ಕಾರ್ಯಕರ್ತರಿಗೆ ಸಂಬಳ ಹೆಚ್ಚಳ ಮಾಡಿಲ್ಲ. ಆಸ್ಪತ್ರೆಗಳಲ್ಲಿ ಔಷಧಿ ಲಭ್ಯವಿಲ್ಲ. ಬರಗಾಲ ಬಂದರೂ ಒಂದೊಂದೇ ಘೋಷಣೆ ಮಾಡುತ್ತಿದ್ದಾರೆ. ಎಲ್ಲ ಆದ ಮೇಲೆ ಕೇಂದ್ರಕ್ಕೆ ನಿಯೋಗ ಹೋಗುವುದಾಗಿ ಹೇಳಿದ್ದಾರೆ ಎಂದರು.



ಡಿ.ಕೆ.ಶಿವಕುಮಾರ್ ಸಿಎಂ ಆದ ನಂತರ ಕಮಿಶನ್ ನಿಂತಿಲ್ಲ. ಆದರೆ ರಾಜ್ಯದಲ್ಲಿ ಮಾತ್ರ ಬರಗಾಲವಿದೆ. ಎಂ ಸ್ಯಾಂಡ್ ತಯಾರಿಸುವ ಕ್ರಶರ್ ಮಾಲೀಕರಿಂದ ತಲಾ ಒಂದು ಕೋಟಿ ರೂ. ಕಮಿಶನ್ ಕೇಳಲಾಗಿದೆ. ಇದರಿಂದಾಗಿ ಕ್ರಶರ್‌ಗಳು ಸ್ಥಗಿತಗೊಂಡಿವೆ. ಎಲ್ಲ ಕಡೆ ಕಾಮಗಾರಿಗಳು ಸ್ಥಗಿತಗೊಂಡಿದೆ. ಇಂತಹ ಸ್ಥಿತಿಯಲ್ಲಿ ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಮಾಡುತ್ತಿದ್ದಾರೆ.

ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ 24,600 ಕೋಟಿ ರೂ. ಹೆಚ್ಚುವರಿಯಾಗಿ ಉಳಿದಿತ್ತು. ಆಗ ಕೊರತೆ ಬಜೆಟ್ ಇರಲಿಲ್ಲ. ಮೂರುವರೆ ವರ್ಷದಲ್ಲಿ ಕೊರತೆ ಬಜೆಟ್‌ಗಳನ್ನೇ ಮಾಡಲಾಗಿದೆ. ನಯಾಪೈಸೆ ಹಣವಿಲ್ಲದಿದ್ದರೂ ಬೊಗಳೆ ಬಿಡುತ್ತಿದ್ದಾರೆ.

ಕಲಬುರ್ಗಿಯಲ್ಲಿ ಮಾಡಿದ ಸಚಿವ ಸಂಪುಟ ಸಭೆಯಿಂದ ಏನು ಪ್ರಯೋಜನವಾಗಿದೆ ಎಂದು ಹೇಳಬೇಕು. ಇದು ಕೇವಲ ಘೋಷಣೆಗಳಾಗಿ ಉಳಿಯಲಿದೆ ಎಂದರು.

ಡಿ.ಕೆ.ಶಿವಕುಮಾರ್‌ಗೆ ಒಕ್ಕಲಿಗರು ಕೂಡ ಮತ ನೀಡುವುದಿಲ್ಲ ಎಂದು ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ. ಆದರೂ ಮುಂದೆ ನಾನೇ ಸಿಎಂ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರ ಮಾತು ನಡೆಯುತ್ತಿಲ್ಲ. ದಬ್ಬಣದಿಂದ ಅವರ ಬಾಯಿ ಹೊಲಿಯಲಾಗಿದೆ. ಅವರನ್ನು ಬಳಸಿಕೊಂಡು ಈಗ ಬದಿಗೆ ಇರಿಸಲಾಗಿದೆ. ಸಿದ್ದರಾಮಯ್ಯ ಈಗ ಹೊಸ ಮನೆಯಲ್ಲಿ ವಿಶ್ರಾಂತಿ ಗ್ಯಾರಂಟಿ ಸಿಕ್ಕಿದೆ. ಅದೇ ರೀತಿ ಮುಂದೆ ಜನರು ಕಾಂಗ್ರೆಸ್‌ಗೆ ವಿಶ್ರಾಂತಿ ನೀಡುತ್ತಾರೆ. ರಾಹುಲ್ ಗಾಂಧಿಯವರಿಗೆ ಕರ್ನಾಟಕ ಎಟಿಎಂ ಆಗಿದೆ.

### ಕೆಪಿಎಸ್‌ಸಿ ಹಗರಣ: ಇನ್ನಷ್ಟು ಸಚಿವರ ಹಗರಣ?

ಕೆಪಿಎಸ್‌ಸಿ ಯುವಜನರ ಬದುಕಿಗೆ ಬೆಂಕಿ ಇಟ್ಟಿದೆ. ಈ ಹಗರಣದಲ್ಲಿ ಬಂಧನಕ್ಕೊಳಗಾದವರು ಯಾರಿಗೆ ಕರೆ ಮಾಡಿದ್ದಾರೆ ಎಂಬ ದಾಖಲೆಗಳಿದ್ದು, ಇನ್ನೂ ಇಬ್ಬರು ಸಚಿವರು ರಾಜೀನಾಮೆ ನೀಡಿದರೂ ಅಚ್ಚರಿ ಪಡಬೇಕಿಲ್ಲ. ಯಾವ ಸಚಿವರ ಆಪ್ತ ಸಹಾಯಕರು ಕರೆ ಮಾಡಿದ್ದಾರೆ ಎಂಬ ದಾಖಲೆ ನನ್ನ ಬಳಿ ಇದೆ. ನಮ್ಮ ಹೋರಾಟದಿಂದ ಒಂದು ವಿಕೆಟ್ ಬೀಳಿಸಿದ್ದೇವೆ. ಬಿಜೆಪಿ ನಾಯಕರು ಶಾಮೀಲಾಗಿದ್ದರೆ ಬಂಧನ ಮಾಡಲಿ ಎಂದರು.

ಸಿದ್ದರಾಮಯ್ಯ ಮನಸ್ಸು ಮಾಡಿದರೆ ಈ ಸರ್ಕಾರ ಬಿದ್ದುಹೋಗುತ್ತದೆ. ಅಹಿಂದ ಚಳವಳಿ ಜೋರಾದರೆ ಡಿ.ಕೆ.ಶಿವಕುಮಾರ್ ಗಂಟು ಮೂಟೆ ಕಟ್ಟಬೇಕಾಗುತ್ತದೆ ಎಂದರು. ನಾವು ಹೋರಾಟ ಮಾಡಿದ ಕಾರಣಕ್ಕೆ ಗಣೇಶೋತ್ಸವಕ್ಕೆ ಡಿಜೆ ಗೆ ಅನುಮತಿ ನೀಡಲಾಗುತ್ತಿದೆ. ಎಲ್ಲೇ ತೊಂದರೆಯಾದರೂ ನಾನು ಅಲ್ಲಿಗೆ ಹೋಗಿ ಎಚ್ಚರಿಕೆ ನೀಡುತ್ತೇನೆ. ಉಮರ್ ಖಾಲಿದ್ ದೇಶದ್ರೋಹದ ಕೆಲಸ ಮಾಡಿರುವುದಕ್ಕೆ ಜೈಲಲ್ಲಿದ್ದಾನೆ. ಕಾಂಗ್ರೆಸ್‌ನವರು ಪಾಕಿಸ್ತಾನದವರನ್ನು ಗೆಳೆಯರು ಎನ್ನುತ್ತಾರೆ. ಕುಕ್ಕರ್ ಬಾಂಬ್ ಹಾಕಿದವನನ್ನು ಬ್ರದರ್ ಎಂದು ಕರೆದಿದ್ದರು. ಇವರಿಂದಾಗಿ ವಿಧಾನಸೌಧದಲ್ಲೂ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಮೊಳಗಿತ್ತು. ಕಾಂಗ್ರೆಸ್ ಯಾರ ಪರ ಎಂದು ಇದರಿಂದಲೇ ತಿಳಿದಿದೆ ಎಂದರು.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481 vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 167,